# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 261 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 23.04.2025 • ಬುಧವಾರ • ಪುಟ:04 • ಬೆಲೆ:2
Volume:02 • Issue: 261 • PRGI No:KARKAN/2023/88055 • VIJAYANAGARA • 23.04.2025 • Wednesday • Page:04 • Rs:2







## ನಿನಗೆ ನೀನೇ ಬೆಳಕು

ಯಶಸ್ಸು ಎಂದರೆ ದಿನನಿತ್ಯ
ಪುನರಾವರ್ತಿಸುವ ಸಣ್ಣ ಪ್ರಯತ್ನಗಳ ಮೊತ್ತ.
– ರಾಬರ್ಟ್ ಕೊಲಿಯರ್

## ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ




# ಬೆಂಗಳೂರಿನಲ್ಲಿ ಉತ್ತರ ಕರ್ನಾಟಕದ ನಾ ಸತ್ತಿಲ್ಲ ನಾಟಕ ಯಶಸ್ವಿ ಪ್ರದರ್ಶನ

### ಟಿ.ಬಿ.ಡ್ಯಾಂ ಕನ್ನಡ ಕಲಾ ಸಂಘ ಕಲಾವಿದರಿಂದ ಪ್ರದರ್ಶನ | ಅಭಿನಯಕ್ಕೆ ಪ್ರೇಕ್ಷಕರು ಫಿದಾ
### ರಂಗ ವಿನ್ಯಾಸ–ನಿರ್ದೇಶನ: ಶ್ರೀಕೃಷ್ಣ ಕುಲಕರ್ಣಿ ಸಾರವಾಡ | ವಕೀಲ ಪಾತ್ರದಲ್ಲಿ ಚಂದ್ರಶೇಖರ್



■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ನಗರದ ಕನ್ನಡ ಕಲಾ ಸಂಘ ಟಿ.ಬಿ.ಡ್ಯಾಂ ತಂಡವು ತನ್ನ ಅರವತ್ತನೇಯ ವರ್ಷಾಚರಣೆ ಸಂಭ್ರಮ ನಿಮಿತ್ತ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ನಾ ಸತ್ತಿಲ್ಲ ಎಂಬ ನಾಟಕದ ಪ್ರದರ್ಶನ ಎರಡು ದಿನ ಯಶಶ್ವಿಯಾಗಿ ಪ್ರದರ್ಶನಗೊಂಡು ಕಲಾಪ್ರೇಕ್ಷಕರ ಮನಸೂರೆಗೊಂಡವು.

ಕರ್ನಾಟಕ ನಾಟಕ ಅಕಾಡೆಮಿಯವರು ಏ.19ರಂದು ಸಂಜೆ ಕಲಾಗ್ರಮದ ಸಮುಚ್ಚಯ ಭವನದಲ್ಲಿ ಆಯೋಜಿಸಿದ್ದರೆ, ಮರುದಿನ ರವಿವಾರ ಸಂಜೆ ಕರ್ನಾಟಕ ಇಂಜಿನಿಯರ್ಸ್ ಅಕಾಡೆಮಿ ಅವರು, ಕಮಲಾನಗರ ಬಸವೇಶ್ವರ ಬಡಾವಣೆಯ ತಮ್ಮ ಪ್ರಭಾತ ರಂಗಮಂದಿರದಲ್ಲಿ ಪ್ರದರ್ಶನ ಏರ್ಪಡಿಸಿದ್ದರು.

ಖ್ಯಾತ ಸಾಹಿತಿ, ಇತಿಹಾಸ ಹಾಗೂ ನೀರಾವರಿ ತಜ್ಞ ಡಾ. ಕೃಷ್ಣ ಕೋಲಾರ ಕುಲಕರ್ಣಿ ವಿಜಯಪೂರ ಅವರು ರಚಿಸಿದ ಈ ನಾಟಕ, ಸತ್ಯ ಅಸತ್ಯಗಳ ನಡುವಿನ ಹೋರಾಟವನ್ನು ಕಾನೂನು, ಧರ್ಮ ಶಾಸ್ತ್ರ, ಸಾಕ್ಷಿ, ಆಧಾರಗಳೊಂದಿಗೆ ಮತ್ತು ವಕೀಲರ ವಾದ ವಿವಾದದೊಂದಿಗೆ ನ್ಯಾಯಾಲಯದಲ್ಲಿ ಮಾತಿನ ಚಕಮುಖಿಗಳು ಪ್ರೇಕ್ಷಕರನ್ನು ಕಟ್ಟಿಹಾಕಿತ್ತು. ನಾಟಕದ ಅಂತ್ಯದ ವರೆಗೂ ನಿಗೂಢತೆ ಕಾಯ್ದು ಕೊಂಡು ತಿಳಿಹಾಸ್ಯದೊಂದಿಗೆ ಕೊನೆಯವರೆಗೂ ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿತು.

ಶಾಸ್ತ್ರದ ಪ್ರಕಾರ ವಾದಿ ಸತ್ಯವಂತರಾವ ಸತ್ತಿರುವನೆಂದು, ಪ್ರತಿವಾದಿಪರ ಸಾಕ್ಷಿಯಾದ ಪ್ರಚಂಡಾಚಾರ ಪಾತ್ರವಹಿಸಿದ ಶ್ರೀಕೃಷ್ಣ ಕುಲಕರ್ಣಿ ಅವರ ಅಭಿನಯ ನೈಜ ಹಾಗೂ ಮನೋಜ್ಞವಾಗಿ ಮೂಡಿ ಬಂದಿತು. ಹಾಗೇಯೇ ಪ್ರತಿವಾದಿ ಭಂಢೆರಾವ ವಕೀಲರ ಪಾತ್ರ ವಹಿಸಿದ ಕಲಾವಿದ ಚಂದ್ರಶೇಖರ, ಅರಳು ಹುರಿದಂತೆ ಮಾತನಾಡವ ಶೈಲಿಯ ಅಭಿನಯ ಪ್ರಶಂಸೆಗೆ ಪಾತ್ರವಾಯಿತು. ವಾದಿಪರ ವಕೀಲ ವಿವೇಕರಾವ ಪಾತ್ರವಹಿಸಿದ ಡಾ. ರಾಜು ಕುಲಕರ್ಣಿ ಪ್ರೇಕ್ಷಕರ ಅನುಕಂಪ ಗಳಿಸುವಲ್ಲಿ ಯಶಸ್ವಿಯಾದರು. ವಾದಿ ಸತ್ಯವಂತರಾವ ಪಾತ್ರಧಾರಿ ಶಿವಾನಂದ ಕೆಂಭಾವಿ ಮಠ, ಪ್ರತಿವಾದಿಯ ಪಾತ್ರ ವಹಿಸಿದ ಗುರುಬಸವರಾಜ ಹಾಗೂ ನ್ಯಾಧೀಶರ ಪಾತ್ರ ವಹಿಸಿದ ಹನುಮಂತ ಪೂಜಾರಿ, ಅವರುಗಳು ತಮ್ಮ ತಮ್ಮ ಪಾತ್ರದ ಗಾಂಭಿರ್ಯತೆಯನ್ನ ಪಾತ್ರದಲ್ಲಿ ತುಂಬಿದ್ದರು.

ಇನ್ನುಳಿದಂತೆ ಸಹ ವಕೀಲರಾದ ರಾಮ ಕುಲಕರ್ಣಿ, ನಾಗರಾಜಾಚಾರಿ, ಬೇಲೀಫ್ ಶ್ರೀನಿವಾಸ ಜೋಷಿ, ಟೈಪಿಷ್ಟ ಅಭಿಷೇಕ, ಬೆಂಚ ಕ್ಲಾರ್ಕ್ ರಾಜಗೋಪಾಲ ಹಾಗೂ ಜವಾನನಾಗಿ ಗೌರವಕುಮಾರ ಪಾತ್ರಕ್ಕೆ ತಕ್ಕಂತೆ ಅಭಿನಯಿಸಿದರು. ಬೆಳಕು ಮಂಜುನಾಥ, ತಾಂತ್ರಕ ನಿರ್ವಹಣೆ ಡಾ. ರಾಜು ಕುಲಕರ್ಣಿ ಹಾಗೂ ಹಿನ್ನೆಲೆ ಸಂಗೀತ ಗಿರೀಶ್ ದೇಸಾಯಿ ಅವರದಾಗಿದ್ದು , ನರೇಂದ್ರ ಬಾಬು ತಂಡದ ನಿರ್ವಹಣೆ ವಹಿಸಿಕೊಂಡಿದ್ದರು. ಶ್ರೀಕೃಷ್ಣ ಕುಲಕರ್ಣಿ ಸಾರವಾಡ ಅವರು ನಾಟಕದ ರಂಗವಿನ್ಯಾಸ ಮತ್ತು ನಿರ್ದೇಶನ ಮಾಡಿದರು. ಉತ್ತರ ಕರ್ನಾಟಕ ತಂಡ ಬೆಂಗಳೂರಿನಲ್ಲಿ ಪ್ರದರ್ಶಿಸಿದ " ನಾ ಸತ್ತಿಲ್ಲ " ನಾಟಕ, ಪ್ರೇಕ್ಷಕರ ಮೆಚ್ಚುಗೆ ಪಡೆದು ಪ್ರಶಂಸೆಗೆ ಪಾತ್ರವಾಯಿತು.

# ಕೊಯ್ಲು ಕಟಾವು ಯಂತ್ರದ ದರ ನಿಗದಿ : ಡಿಸಿ ಆದೇಶ

### 1 ಎಕರೆ ಬೆಳೆ ಕಟಾವು ಯಂತ್ರಕೆಕ ರೂ.2300 ಫಿಕ್ಸ್

■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯಲ್ಲಿ ಬೆಳೆದ ಬೇಸಿಗೆ ಹಂಗಾಮಿನ ಭತ್ತ, ರಾಗಿ ಹಾಗೂ ವಿವಿಧ ಬೆಳೆಗಳ ಕಟಾವು ಕಾರ್ಯ ಪ್ರಗತಿಯಲ್ಲಿದ್ದು, ಬಹುತೇಕ ಕಡೆ



ಬೆಳೆಗಳನ್ನು ಕಟಾವು ಯಂತ್ರಗಳ ಮೂಲಕ ಕಟಾವು ಮಾಡಲಾಗುತ್ತಿದೆ. ಪ್ರಸ್ತುತ ಜಿಲ್ಲೆಯಲ್ಲಿ ಲಭ್ಯವಿರುವ ಕಂಬೈನ್ ಹಾರ್ವೆಸ್ಟರ್ ಯಂತ್ರಗಳೊಂದಿಗೆ ಹೊರ ರಾಜ್ಯದ ಬಹುತೇಕ ಕಂಬೈನ್ ಹಾರ್ವೆಸ್ಟರ್ ಯಂತ್ರಗಳಿಂದಲೂ ಸಹ ಬೆಳೆ ಕಟಾವು ಮಾಡಲಾಗುತ್ತಿದೆ. ಖಾಸಗಿ ವಾಹನ ಮಾಲೀಕರು ಪ್ರತಿ ಎಕರೆಗೆ ರೂ.3000 ವರೆಗೆ ರೈತರಿಂದ ನಗದು ಪಡೆದು ಕಟಾವು ಮಾಡುತ್ತಿರುವುದು ತಿಳಿದು ಬಂದಿರುತ್ತದೆ. ಪ್ರಸ್ತುತ ದರವು ರೈತರಿಗೆ ಹೆಚ್ಚಿನ ಹೊರೆಯಾಗುತ್ತಿರುವುದರಿಂದ ಕಟಾವು ಕಾರ್ಯ ಕುಂಠಿತವಾಗುತ್ತಿದೆ. ಆದ್ದರಿಂದ ರೈತರಿಗೆ ಅನುಕೂಲವಾಗುವ ದೃಷ್ಠಿಯಿಂದ ಜಿಲ್ಲೆಯಾದ್ಯಂತ 1 ಎಕರೆ ಬೆಳೆಯನ್ನು ಕಂಬೈನ್ ಹಾರ್ವೆಸ್ಟರ್ ಯಂತ್ರದ ಮೂಲಕ ಕಟಾವು ಮಾಡಲು ರೂ.2300ನ್ನು ನಿಗದಿಪಡಿಸಲಾಗಿದೆ. ಎಲ್ಲಾ ಕಂಬೈನ್ ಹಾರ್ವೆಸ್ಟರ್ ಮಾಲೀಕರು ನಿಗದಿಪಡಿಸಿದ ದರದಂತೆ ಕಾರ್ಯನಿರ್ವಹಿಸಲು ಸೂಚಿಸಲಾಗಿದೆ. ತಪ್ಪಿದಲ್ಲಿ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ಡಿಸಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

# ಮೇ.5 ರಂದು ಸಾರಿಗೆ ಅದಾಲತ್ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ಪ್ರಾದೇಶಿಕ ಸಾರಿಗೆ ಇಲಾಖೆ ವತಿಯಿಂದ ಮೇ.5 ರಂದು, ಮಧ್ಯಾಹ್ನ 12.00 ಗಂಟೆಗೆ, ಹೊಸಪೇಟೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಸಾರಿಗೆ ಅದಾಲತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಸಾರಿಗೆ ಅದಾಲತ್ ಕಾರ್ಯಕ್ರಮದ ಸದುಪಯೋಗಪಡೆಯಬೇಕೆಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ವಸಂತ ಈಶ್ವರ ಚವ್ಹಾಣ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ಸುಜುಕಿ ಆಕ್ಸಿಸ್ ಗ್ರಾಹಕರ ವಿಶ್ವಾಸದ ವಿಜಯೋತ್ಸವ

## Suzuki Access ಸ್ಕೂಟರ್ ಮಾರಾಟದಲ್ಲಿ ಹೊಸ ಮೈಲುಗಲ್ಲು

### ಮುನೀರ್ ಸುಜುಕಿ ನಿರ್ದೇಶಕ ಸೈಯದ್ ಅಮ್ಮಾರ್ ಅಹ್ಮದ್ ಹೇಳಿಕೆ | ಗ್ರಾಹಕರೊಂದಿಗೆ ಸಂಭ್ರಮೋತ್ಸವ ಆಚರಣೆ
### ಹೊಸಪೇಟೆಯಲ್ಲಿ ಎರಡೇ ತಿಂಗಳಲ್ಲಿ 600ಕ್ಕೂ ಅಧಿಕ ವಾಹನಗಳ ಮಾರಾಟ | ಸ್ಟೈಲಿಷ್, ಮೈಲೇಜ್ ಜತೆಗೆ ಮೃದು ಸವಾರಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಭಾರತದ ಜನಪ್ರಿಯತೆ ದ್ವಿಚಕ್ರವಾಹನಗಳಲ್ಲಿ ಒಂದಾಗಿರುವ ಸುಜುಕಿ ಅಕ್ಸೆಸ್ ಸ್ಕೂಟರ್ ಲೋಕಾರ್ಪಣೆಗೊಂಡ ಎರಡು ತಿಂಗಳಲ್ಲೇ ಗುರಿ ಮೀರಿ ವಾಹನಗಳು ಮಾರಾಟವಾಗಿದ್ದು, ದ್ವಿಚಕ್ರ ವಾಹನ ಕ್ಷೇತ್ರದಲ್ಲಿ ಅಪರೂಪದ ಮತ್ತು ಗಮನಾರ್ಹ ಸಾಧನೆ ಎನಿಸಿದೆ ಎಂದು ಮುನೀರ್ ಸುಜುಕಿ ನಿರ್ದೇಶಕ ಸೈಯದ್ ಅಮ್ಮಾರ್ ಅಹ್ಮದ್ ಹೇಳಿದರು.

ಸುಜುಕಿ ಮೋಟಾರ್‌ಸೈಕಲ್ ಇಂಡಿಯಾ ಪ್ರೈವೇಟ್ ಲಿ. ಸಂಸ್ಥೆಯು ಸುಜಿಕಿ ಆಕ್ಸೆಸ್ ದ್ವಿಚಕ್ರ ವಾಹನಗಳ ಮಾರಾಟದ ವಿಜಯೋತ್ಸವವನ್ನು ದೇಶದಾದ್ಯಂತ ಸಂಭ್ರಮಾಚರಣೆ ಆಚರಿಸಿದ ಹಿನ್ನೆಲೆಯಲಿ ನಗರದ ವಿಜಯನಗರ ಕಾಲೇಜ್ ಪಕ್ಕದ 100 ಹಾಸಿಗೆ ಆಸ್ಪತ್ರೆ ರಸ್ತೆ, ಬಸವೇಶ್ವರ ಬಡಾವಣೆ ಯಲ್ಲಿರುವ ಮುನೀರ್ ಸುಜುಕಿ ಶೋ ರೂಂನಲ್ಲಿ ಗ್ರಾಹಕರೊಂದಿಗೆ ಕೇಕ್ ಕತ್ತರಿಸಿ ಸಿಹಿ ಹಂಚಿ ಮಾತನಾಡಿದರು. ಸುಜುಕಿ ಆಕ್ಸೆಸ್ ಗ್ರಾಹಕರ ಮೆಚ್ಚುಗೆಗೆ ಪಾತ್ರವಾಗಿದೆ. ಲೋಕಾರ್ಪಣೆಗೊಂಡು ಕೇವಲ ಎರಡು ತಿಂಗಲ್ಲಿ 600ಕ್ಕೂ ಅಧಿಕ ವಾಹನಗಳನ್ನು ಮಾರಾಟ ಮಾಡಲಾಗಿದೆ. ನಮ್ಮ ಗ್ರಾಹಕರ ಆಶೀರ್ವಾದದಿಂದಲೇ ಈ ಸಾಧನೆ ಸಾಧ್ಯವಾಗಿದೆ. ಹಂಬಲಕ್ಕೆ ಮೀರಿ ಬೆಂಬಲ ನೀಡಿದ ಎಲ್ಲಾ ಗ್ರಾಹಕರಿಗೆ ಶೋರೂಮ್‌ನಿಂದ ಧನ್ಯವಾದಗಳು ಎಂದ ಅವರು, ವಾಹನದ ವೈಶಿಷ್ಟ್ಯವನ್ನು ಪರಿಚಯಿಸಿದರು. ಅತ್ಯಾಕರ್ಷಕ ಡಿಸೈನ್ ಹೊಂದಿದ್ದು, ಪುನರ್ ಆಕೃತೀಕರಿಸಿದ ಡಿ.ಆರ್.ಎಲ್. ಮತ್ತು ಎಲ್ಇಡಿ ಹೆಡ್‌ಲೈಟ್ ಮತ್ತು ಕ್ರೋಮ್ ಫನಿಶಿಂಗ್, ಎಲ್.ಇ.ಡಿ ಟೈಲ್‌ಲೈಟ್‌ಗಳನ್ನು ಒಳ ಗೊಂಡಿದೆ. ಉತ್ತಮ ಮೈಲೇಜ್ ಮತ್ತು ವೇಗ ನೀಡುತ್ತದೆ. ಸೀಟ್ ಎತ್ತದೆ ಇಂಧನ ತುಂಬಲು ಅವಕಾಶ ಕಲ್ಪಿಸಲಾಗಿದೆ. ಹೆಚ್ಚುವರಿ ಸ್ಟೋರೇಜ್ ಗಾಗಿ ಸೀಟ್ ಕೆಳಗೆ 24.4 ಲೀಟರ್‌ನಷ್ಟು ಸಂಗ್ರಹಣ ಸ್ಥಳವಿದೆ. ಹಿಂಬದಿ ಸಸ್ಪೆನ್ಷನ್ ಸುಧಾರಣೆಗೊಳಿಸಲಾಗಿದೆ. ವಿಶೇಷವಾಗಿ ಪಾಸಿಂಗ್ ಸ್ವಿಚ್, ಹ್ಯಾಜರ್ಡ್ ಸ್ವಿಚ್ ಮತ್ತು ಬ್ರೇಕ್ ಲಾಕ್ ಸೇರಿಸಿದ್ದು ಗ್ರಾಹಕರಿಗೆ ಖುಷಿ ನೀಡಿದೆ. ಡಿಜಿಟಲ್ ಇನ್ಸ್ಟ್ರುಮೆಂಟ್ ಕ್ಲಸ್ಟರ್‌ನಲ್ಲಿ ಬ್ಲೂಟೂತ್



ಸೌಲಭ್ಯವಿರುವ ಡಿಜಿಟಲ್ ಡ್ಯಾಶ್ ಬೋರ್ಡ್, ಸುಜುಕಿ ರೈಡ್ ಕನೆಕ್ಟ್ ಅಪ್ಲಿಕೇಶನ್ ಮೂಲಕ ವೈವಿಧ್ಯಮಯ ವೈಶಿಷ್ಟ್ಯ ತೆಗಳನ್ನು ಒದಗಿಸಿದೆ. ಕ್ಯಾಲೆಂಡರ್ ಅಲರ್ಟ್, ರೇನ್ ಅಲರ್ಟ್, ಮೈಲೇಜ್, ಸರ್ವಿಸ್ ರಿಮೈಂಡರ್ ಮಾಹಿತಿಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಗ್ರಾಹಕರ ಅನುಕೂಲಕ್ಕೆ ತಕ್ಕಂತೆ ಸುಜುಕಿ ಅಕ್ಸೆಸ್‌ನ್ನು 3 ರೂಪಗಳಲ್ಲಿದ್ದು ಬೇಸಿಕ್ ಮಾಡೆಲ್, ಸ್ಟ್ಯಾಂಡರ್ಡ್ ಹಾಗೂ ಬ್ಲೂಟೂತ್ ರೂಪಗಳಲ್ಲಿ ಬಿಡುಗಡೆಗೊಂಡಿರುವುದನ್ನು ಎಲ್ಲಾ ವಯೋಮಾನದ ಗ್ರಾಹಕರು ಅಪ್ಪಿಕೊಂಡಿದ್ದಾರೆ. ದಿನದಿಂದ ದಿನಕ್ಕೆ ಬೇಡಿಕೆಯೂ ಹೆಚ್ಚಾಗಿದೆ. ಆಯ್ದ ಬಣ್ಣಗಳಲ್ಲಿ ವಾಹನಗಳು ಲಭ್ಯವಿದ್ದು, ಖರೀದಿಸಲು ಬಂದ ಗ್ರಾಹಕರಿಗೆ ಅಂದೇ ಡೆಲವರಿ ನೀಡಲಾಗುತ್ತಿದೆ. ಸಿಬ್ಬಂದಿಗಳ ಉತ್ತಮ ಸ್ಪಂದನೆ, ಗ್ರಾಹಕರಿಗೆ ಗುಣಮಟ್ಟದ ಸರ್ವೀಸ್ ನೀಡಲಾಗುತ್ತಿದೆ. ವಾಹನ ಪಡೆಯುವವರಿಗೂ ಸಾಲ ಸೌಲಭ್ಯಗಳನ್ನೂ ಕಲ್ಪಿಸಲಾಗುತ್ತಿದೆ ಎಂದರು.

ವಾಹನ ಮಾರಾಟ ಪ್ರಾದೇಶಿಕ ವ್ಯವಸ್ಥಾಪಕ ಸಿದ್ದನಗೌಡ ಮಾತನಾಡಿ, ಸ್ವಲ್ಪ ಸಮಯದೊಳಗೆಯೇ ಶೇಕಡಾ 20 ಪ್ರಮಾಣದಲ್ಲಿ ವಾಹನ ಮಾರಾಟದ ಪ್ರಮಾಣ ಹೆಚ್ಚಾಗಿರುವುದು, ಗ್ರಾಹಕರ ವಿಶ್ವಾಸ ಮತ್ತು ತಂತ್ರಜ್ಞಾನ–ಆಧಾರಿತ ವೈಶಿಷ್ಟ್ಯಗಳ ಪ್ರತೀಫಲವಾಗಿದೆ. "ಮೈಲೇಜ್, ಭರವಸೆ ಮತ್ತು ನಯವಾದ ಸವಾರಿ ಅನುಭವ" ಎನ್ನುವ ಮೂರು ತತ್ವಗಳ ಸುತ್ತ ಸುಜುಕಿ ಆಕ್ಸೆಸ್ ಸ್ಕೂಟರ್ ಗ್ರಾಹಕರನ್ನು ತನ್ನತ್ತ ಆಕರ್ಷಿಸಿದೆ. ಸ್ಪರ್ಧಾತ್ಮಕ ಬೆಲೆ, ಶಕ್ತಿಶಾಲಿ ಎಂಜಿನ್ ಹಾಗೂ ನೂತನ ಡಿಜಿಟಲ್ ವೈಶಿಷ್ಟ್ಯಗಳೊಂದಿಗೆ ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿದೆ. ಪ್ರತಿದಿನವೂ ಹೊಸ ಖರೀದಿದಾರರನ್ನು ತನ್ನ ಕಡೆ ಸೆಳೆಯುತ್ತಿದೆ. ಇದೊಂದು ಫ್ಯಾಮಿಲಿ ಸ್ಕೂಟರ್ ಮಾತ್ರವಲ್ಲ, ಹೆಚ್ಚು ನಂಬಿಕೆ ಕೊಡಬಹುದಾದ ಸಾರಿಗೆ ಸಂಗಾತಿಯೂ ಹೌದು ಎಂದು ಅನೇಕ ಗ್ರಾಹಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬುಕ್ಕಿಂಗ್ ಮತ್ತು ಮಾಹಿತಿಗಾಗಿ ಮೊ:9900702149, 6366655589 ಸಂಪರ್ಕಿಸಬಹುದು ಎಂದರು. ಇದೇ ಸಂದರ್ಭದಲ್ಲಿ ಆಯ್ದ ಗ್ರಾಹಕರಿಗೆ ಬಹುಮಾನ ವಿತರಿಸಿದರು. ಶೋರೂಂ ಸಿಬ್ಬಂದಿ, ಗ್ರಾಹಕರಿದ್ದರು.









**ಹೊಸ ವಿನ್ಯಾಸದೊಂದಿಗೆ ಮಾರುಕಟ್ಟೆಗೆ ಬಂದ ಎರಡೇ ತಿಂಗಳಲ್ಲಿ ದೇಶದಾದ್ಯಂತ ಶೇ.20 ರಷ್ಟು ಸುಜುಕಿ ಆಕ್ಸೆಸ್ ವಾಹನ ಮಾರಾಟ ಹೆಚ್ಚಳಗೊಂಡಿದೆ. ಗ್ರಾಹಕರ ಬೆಂಬಲದಿಂದ ಮಾರಾಟದಲ್ಲಿ ಹೊಸ ಮೈಲುಗಲ್ಲು ಸ್ಥಾಪಿಸಲಾಗಿದೆ. ಗ್ರಾಹಕರಿಗೆ ಧನ್ಯವಾದಗಳು.**

**– ಸೈಯದ್ ಅಮ್ಮಾರ್ ಅಹ್ಮದ್**
ಮುನೀರ್ ಸುಜುಕಿ ನಿರ್ದೇಶಕ, ಹೊಸಪೇಟೆ



**ನೂತನ ಸುಜುಕಿ ಆಕ್ಸೆಸ್ ಸ್ಕೂಟರ್‌ನ ride ಬಹಳ ನಯವಾಗಿದೆ. ನಾನು ಪ್ರತಿದಿನ ಉಪಯೋಗಿಸುತ್ತೇನೆ. ಮೈಲೇಜ್ ಚೆನ್ನಾಗಿದ್ದು, ಸವಾರಿ ಮೃದು ಮತ್ತು ಆರಾಮದಾಯಕವಾಗಿದೆ. ಖರೀದಿಸಿದ್ದಕ್ಕೆ ಖುಷಿ ನೀಡಿದೆ. ಹಿರಿಯರಿಗೂ ಸೂಕ್ತವಾಗಿದೆ.**

**– ನಂದಕಿಶೋರ್ ಸಿಂಘಿ, ಗ್ರಾಹಕರು, ಹೊಸಪೇಟೆ**




**ಶಾಪಿಂಗ್, ಆಫೀಸ್, ಸಂಡೇ ಟ್ರಿಪ್ ಎಲ್ಲಿಗೆ ಬೇಕಾದರೂ ಹೋಗಲು ಇದು ಫರ್ಫೆಕ್ಟ್ ಆಗಿದೆ. ಸ್ಕೂಟರ್ ಸ್ಟೈಲಿಷ್ ಆಗಿದ್ದು, ಫ್ಯಾಮಿಲಿ ಸದಸ್ಯರ ನೆಚ್ಚಿನ ಸವಾರಿಯೂ ಆಗಿದೆ. ಇದನ್ನು ರೈಡ್ ಮಾಡಿದಾಗಲೇ ಅತ್ಯುತ್ತಮ ಅನುಭವವಾಗುತ್ತದೆ.**

**– ಮೊಹ್ಮದ್ ರಫೀಕ್, ಗ್ರಾಹಕರು, ಹೊಸಪೇಟೆ**

# ನಮ್ಮಮ್ಮ ಈ ಭೂಮಿ ತಾಯಿ

■ ಪ್ರಜ್ಞಾ ರವೀಶ್ ಕುಳಮರ್ವ, ಕಾಸರಗೋಡು

ಸಮುದ್ರ ವಸನೆ ದೇವಿ
ಪರ್ವತಸ್ಥನ ಮಂಡಲೇ
ವಿಷ್ಣು ಪತ್ನಿ ನಮಸ್ತುಭ್ಯಂ
ಪಾದಸ್ಪರ್ಶಂ ಕ್ಷಮಸ್ವಮೇ



ಇದೊಂದು ಭೂಮಾತೆಗೆ ಕ್ಷಮೆ ಕೋರುವ ಶ್ಲೋಕವಾಗಿದೆ. ನಾವು ಎಲ್ಲರೂ ಸದಾ ಕಾಲಿಟ್ಟು ನಡೆಯುವ ಭೂ ತಾಯಿಗೆ ನೋವಾಗುತ್ತದೆ ಅಲ್ಲವೇ?! ಅವಳಿಗೆ ಕ್ಷಮೆ ಕೇಳಬೇಕು ಅಲ್ಲವೇ?! ಅದಕ್ಕೆಂದು ದಿನಾಲೂ ಬೆಳಗ್ಗೆ ಎದ್ದ ಕೂಡಲೇ ಭೂಮಿ ಗೆ ನಮ್ಮ ಪಾದಗಳನ್ನು ಇಡುವ ಮೊದಲೇ ಈ ಕ್ಷಮಾರ್ಪಣ ಶ್ಲೋಕವನ್ನು ಹೇಳಬೇಕು ಎಂದು ಪೂರ್ವಜರು ಹೇಳುತ್ತಾರೆ.

ಸಮುದ್ರ ವಸನೆ ದೇವಿ ಎಂದರೆ ಸಮುದ್ರವನ್ನೇ ಬಟ್ಟೆಯನ್ನಾಗಿ ಧರಿಸಿದ ಭೂದೇವಿ. ಪರ್ವತಸ್ಥನ ಮಂಡಲೇ ಎಂದರೆ ಪರ್ವತವನ್ನು ಮಂಡಲವಾಗಿ ಉಳ್ಳವಳೇ. ವಿಷ್ಣು ಪತ್ನಿ ನಮಸ್ತುಭ್ಯಮ್ ಎಂದರೆ ವಿಷ್ಣುವಿನ ಪತ್ನಿಯಾದ ಭೂ ತಾಯಿಯೇ. ಪಾದ ಸ್ಪರ್ಶಂ ಕ್ಷಮಸ್ವಮೇ ಎಂದರೆ ನಾನು ತಾಯಿ ಸ್ವರೂಪಿಯಾದ ನಿನ್ನನ್ನು ನನ್ನ ಪಾದಗಳಿಂದ ತುಳಿಯುತ್ತಿದ್ದೇನೆ, ಅಮ್ಮಾ ನನ್ನನ್ನು ಕ್ಷಮಿಸು ಎಂದು.

ಎಷ್ಟು ನಿಜವಾದ ಅರ್ಥ ಹೊಂದಿರುವ ಶ್ಲೋಕ ಅಲ್ಲವೇ?!ಭೂಮಿಯನ್ನು ತಾಯಿಯಾಗಿ, ದೇವಿಯಾಗಿ ಪೂಜಿಸುತ್ತೇವೆ. ಕೆಡ್ಡಸದ ಆಚರಣೆಯಲ್ಲಿ ಭೂ ತಾಯಿಗೆ, ತುಳಸಿ ಕಟ್ಟೆಯ ಬಳಿ, ಸ್ನಾನ ಮಾಡಲು ಎಣ್ಣೆ ಇಟ್ಟು, ಸಾಬೂನ್ ಇಡುವ ಪದ್ಧತಿ ಇದೆ ಅಂದರೆ ಭೂ ತಾಯಿ ಅಶುದ್ಧ ಆಗುತ್ತಾಳೆ, ಅವಳನ್ನು ಶುದ್ಧ ಮಾಡಲು ಇದನ್ನು, ವಿಷ್ಣು ಪ್ರಿಯೆ ಆದ ತುಳಸಿ ಕಟ್ಟೆಯ ಬಳಿ ಇಡುವುದು ಒಂದು ಆಚರಣೆ.

ಆದರೆ ಈಗ ಭೂಮಿಯನ್ನು ತಾಯಿ, ದೇವಿ ಎಂದೂ ನೋಡದೇ ಅವಳಿಗೆ ನೋವುಣಿಸುತ್ತಾರೆ ಮನುಷ್ಯರು. ಭೂ ತಾಯಿ ಎಲ್ಲವನ್ನೂ ಸಹಿಸಿಕೊಂಡೇ ಬಂದಿದ್ದಾಳೆ, ಆದರೆ ಅವಳ ಸಹನೆಗೂ ಮಿತಿ ಇದೆ ಅಲ್ಲವೇ?!, ವಾಯು ಮಾಲಿನ್ಯ, ಶಬ್ದ ಮಾಲಿನ್ಯ, ಪರಿಸರ ಮಾಲಿನ್ಯವು ಆಗುತ್ತಲೇ ಇವೆ. ಅಲ್ಲಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಎಸೆಯುವುದು, ಕಾಡನ್ನು ಕಡಿದು, ಆಮ್ಲಜನಕವನ್ನು ಕಡಿಮೆ ಮಾಡಿ ,ಪರಿಸರದಲ್ಲಿ ಇಂಗಾಲದ ಡೈಆಕ್ಸೈಡ್ ಪ್ರಮಾಣವನ್ನು ಹೆಚ್ಚಿಸುವುದು ನಮ್ಮ ಕಣ್ಣೆದುರಿಗೇ ನಡೆಯುವ ದೃಶ್ಯವಾಗಿದೆ. ಭೂಮಿಯಲ್ಲಿ ನಾವು ಮಾತ್ರ ಅಲ್ಲದೇ ಅಖಂಡ ಜೀವ ರಾಶಿಗಳೂ ಬದುಕಬೇಕು ಅಲ್ಲವೇ?! ನಮ್ಮ ಉಳಿವಿನೊಂದಿಗೆ ಅವುಗಳನ್ನೂ ಉಳಿಸುವುದು ನಮ್ಮ ಕರ್ತವ್ಯವೇ ಅಲ್ಲವೇ?! ಬುದ್ಧಿ ಜೀವಿಗಳಾದ ಮಾನವರೇ ಹೀಗೆ ಮಾಡಿದರೆ ಮುಂದೊಂದು ದಿನ, ಎಲ್ಲಾ ತನ್ನ ಒಡಲಿನಲ್ಲಿ ಬಚ್ಚಿಟ್ಟಿರುವ ಭೂ ತಾಯಿಯು ಮುನಿಸುವುದರಲ್ಲಿ ಯಾವ ಸಂಶಯವೂ ಇಲ್ಲ.

ಕೈಗಾರೀಕರಣ, ನಗರೀಕರಣ ಎಂದು ನಾವು ಈ ಭೂಮಿಯನ್ನು ನಾಶ ಮಾಡುತ್ತಲೇ ಬಂದಿದ್ದೇವೆ ಹಾಗಾಗಿ ಕಾಲಕ್ಕೆ ತಕ್ಕಂತೆ ಮಳೆ ಇಲ್ಲ , ಬೆಳೆ ಇಲ್ಲ ಇತ್ತೀಚೆಗೆ ರೈತರು ಮಾತ್ರ ಅಲ್ಲದೇ ಎಲ್ಲಾ ಮಾನವರೂ ಕಂಗಾಲಾಗಿದ್ದೇವೆ. ನಾವು ಹೀಗೆಯೇ ಮುಂದುವರೆದರೆ ಬೆಲೆ ಏರಿಕೆ ಆಗದೆ ಇರುತ್ತದೆಯೇ? ಮನುಷ್ಯನಿಗೂ ಇತರ ಪ್ರಾಣಿಗಳಿಗೂ ಬದುಕಲು ಭೂಮಿಯನ್ನು ಬಿಟ್ಟರೆ ಬೇರೆ ಯೋಗ್ಯವಾದ ಗ್ರಹ ಇದೆಯೇ ಎಂದು, ನಾವು ಒಮ್ಮೆ ಈ ಕೃತ್ಯಗಳನ್ನು ಮಾಡುವ ಮೊದಲು ಆಲೋಚಿಸಬೇಕು ಅಲ್ಲವೇ?! ಮಾನವ ತಾನೂ ಬದುಕಿ ಇತರ ಜೀವ ರಾಶಿಗಳನ್ನು ಕೂಡಾ ಬದುಕಲು ಬಿಡಬೇಕು.

ಇನ್ನು ಮುಂದೆ ಆದರೂ ನಮ್ಮ ಸುತ್ತಲಿನ ಪರಿಸರವನ್ನು ರಕ್ಷಿಸಿ, ಉಳಿಸಿ, ಬೆಳೆಸಿ, ಮುಂದಿನ ಪೀಳಿಗೆಯನ್ನು ರಕ್ಷಿಸೋಣ ಹಾಗೂ ಯುವ ಪೀಳಿಗೆಯನ್ನು ಕೃಷಿಯತ್ತ ಒಲವು ತೋರುವಂತೆ ಮಾಡುವಲ್ಲಿ ಪಣ ತೊಟ್ಟು, ಜೂನ್ 5, ವಿಶ್ವ ಪರಿಸರ ದಿನದಂದು ಮಾತ್ರವಲ್ಲದೇ ,ವಾರಕ್ಕೊಮ್ಮೆ ಆದರೂ ಸಾಧ್ಯವಾದಷ್ಟು ಗಿಡಗಳನ್ನು ನೆಟ್ಟು, ಹಸಿರನ್ನು ಉಳಿಸಿ ಬೆಳೆಸೋಣ,ನಮ್ಮ ಸುತ್ತಲಿನ ಪರಿಸರವನ್ನು ತ್ಯಾಜ್ಯ ಮುಕ್ತ ಪರಿಸರವನ್ನಾಗಿ ಮಾಡೋಣ, ಈ ಮೂಲಕ ಮಾತೃ ಸ್ವರೂಪಿಯಾದ ಭೂ ತಾಯಿಯನ್ನು ಅಪಾಯದಿಂದ ರಕ್ಷಿಸಿ, ಹಲವು ರೋಗಗಳು ಬಾರದಂತೆ ದೇಶವನ್ನೇ ಅಪಾಯದ ಅಂಚಿನಿಂದ ಮುಕ್ತಗೊಳಿಸುವ ಕಾರ್ಯದಲ್ಲಿ ಮುಂದಾಗೋಣ ಏನಂತೀರಾ?!

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ–ಮೇಲ್:hampitimes@gmail.com

M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ರಸ್ತೆ ಅಪಘಾತಗಳಿಗೆ ಕುಟುಂಬಗಳು ಅನಾಥ ಅಪಘಾತ ತಡೆಗೆ ಪಠ್ಯದಲ್ಲೇ ಸಾರಿಗೆ ಶಿಕ್ಷಣ?

ನಮ್ಮೂರಿನಲ್ಲಿ ಮೊನ್ನೆ ಮೊನ್ನೆ ಬಸ್ಸೊಂದು ರಸ್ತೆಯಿಂದ ದಾಟಿ ದರೆಯಿಂದ ಉರುಳಿ ಮನೆಯ ಮೇಲೆ ಬಿದ್ದಿತು. ಅನೇಕರು ಗಾಯಗೊಂಡಿದ್ದರು. ಅಲ್ಲಿದ್ದ ಒಬ್ಬರು 'ಬಸ್ಸನ್ನು ಯಮಧೂತನಂತೆ ಓಡಿಸಿಕೊಂಡು ಬಂದು ಈ ಕಣಿವೆಗೆ ನೂಕಿ ಬಿಟ್ಟ ಚಾಲಕನ ಕರ್ತವ್ಯ ಲೋಪ' ಅನ್ನೋ ಮಾತುಗಳನ್ನು ಹೇಳುತ್ತಿದ್ದರು. ಈ ನಡುವೆ ಸರ್ಕಾರ ರಸ್ತೆಯನ್ನು ಸೂಕ್ತವಾಗಿ ಮಾಡದಿದದ್ದು, ಬಸ್ಸುಗಳ ನಿರ್ವಹಣೆ ಇಲ್ಲದಿರುವುದು, ಬಸ್ಸಿನಲ್ಲಿ ಕುಳಿತವರ ಹಣೆ ಬರಹ ಸರಿಯಿಲ್ಲ ಅನ್ನೋದು ಕಡೆಗೆ ಆ ಮನೆಯವರ ದೆಸೆಯೇ ಕೆಟ್ಟಿತ್ತು ಅಂಬೋದೆಲ್ಲ ಚರ್ಚೆಗೆ ಒಳಗಾಗಿ ಮತ್ತೆ ತಣ್ಣಗಾಯಿತು. ನಾವೆಲ್ಲರೂ ನಮ್ಮ ದೈನಂದಿನ ಕೆಲಸ ಕಾರ್ಯಗಳಿಗೆ ರಸ್ತೆ ಮತ್ತು ಸಾರಿಗೆಯನ್ನು ಅಪ್ಪಿಕೊಂಡಿದ್ದೇವೆ. ನಮ್ಮ ಅನುಕೂಲದ ನೆಲೆಯಲ್ಲಿ ನಾವು ಸ್ವಂತ ವಾಹನಗಳನ್ನು ಹೊಂದಿದ್ದೇವೆ. ಒಂದಲ್ಲ ಒಂದು ರಸ್ತೆಯಲ್ಲಿ ವಾಹನಗಳು ಚಲಿಸುತ್ತವೆ. ದಿನದಲ್ಲಿ ಅದೆಷ್ಟೋ ಅಪಘಾತಗಳು ನಡೆದು ಹೋಗುತ್ತದೆ. ವರ್ಷದಲ್ಲಿ ಸಾವಿರಾರು ಜನ ಸಾವು ಕಾಣುತ್ತಾರೆ, ಕಾಲು–ಕೈಗಳನ್ನು ಕಳೆದುಕೊಳ್ಳುತ್ತಾರೆ, ಅನಾಥರಾಗುತ್ತಾರೆ. ನೂರಾರು ಕೇಸುಗಳು ದಾಖಲಾಗುತ್ತದೆ. ಜಗಳ, ಪೆಟ್ಟು, ದ್ವೇಷಗಳು ಹುಟ್ಟಿಕೊಳ್ಳುವುದು ಒಂದು ರೂಪವಾದರೆ ಇನ್ನೊಂದು ಕಡೆ ಅನೇಕ ಬಗೆಯ ವಾಹನಗಳನ್ನು ಕಂಪೆನಿಗಳು ತಯಾರಿಸಿ ಮಾರುಕಟ್ಟೆಗೆ ಪ್ರಚಾರ ಮಾಡುತ್ತವೆ. ಅದೆಷ್ಟೋ ಜನ ವಾಹನ ಚಾಲನೆಯ ಲೈಸೆನ್ಸ್‌ಗಳನ್ನು ಪಡೆಯುತ್ತಿದ್ದರೆ. ಹೊಸ ರಸ್ತೆಗಳು, ಟೋಲುಗಳು, ಸೇತುವೆಗಳು, ಉರುಳಿ ಬಿದ್ದು ರೂಪ ಕಳೆದ ವಾಹನಗಳು ಮತ್ತೆ ಹೊಸ ರೂಪ ಪಡೆದು ಹೊಸ ವಧುವಿನಂತೆ ಕಾಣುತ್ತವೆ. ಇದೆಲ್ಲ ಮನುಷ್ಯನ ಬದುಕಿನ ಅನಿವಾರ್ಯತೆಯಿಂದ ರಚಿತವಾಗುವ ಸಂಸ್ಕೃತಿ ಅಷ್ಟೇ.



ಸರ್ಕಾರವು ಅಪಘಾತವನ್ನು ತಡೆಯುವುದಕ್ಕೆ ಅನೇಕ ಕಾನೂನುಗಳನ್ನು ರೂಪಿಸಿ, ದಂಡವನ್ನು ನಿಗದಿಪಡಿಸಿದೆ. ನೂರಲ್ಲಿ ಹತ್ತು ಜನ ಈ ಕಾನೂನಿಗೆ ಒಳಗಾಗುತ್ತಾರೆ. ಸಾಮಾನ್ಯವಾಗಿ ಬಹುತೇಕರು ರಸ್ತೆಯಲ್ಲಿ ವಾಹನ ಚಲಾಯಿಸುವಾಗ ನಿಯಮವನ್ನು ಪಾಲಿಸುವುದು ಇಲ್ಲ. ಅಂದರೆ ಅವರಿಗೆ ಅದರ ದಟ್ಟವಾದ ಅರಿವು ಇರುವುದಿಲ್ಲ. ಪೊಲೀಸರು ಕಂಡ ಕೂಡಲೇ ಸೀಟು ಬೆಲ್ಟು ಹಾಕಬೇಕು, ತಲೆಗೆ ಹೆಲ್ಮೆಟ್ ಧರಿಸಬೇಕು ಅನ್ನೋದು ಗೊತ್ತು ಲಘು ಬಗೆಯಿಂದ ಹಾಕಿಕೊಂಡು ಗಲಿಬಿಲಿಗೊಳ್ಳುವವರನ್ನು ನಾವು ಕಂಡಿದ್ದೇವೆ. ಪೊಲೀಸರು ಇದ್ದಾರೆ ಅನ್ನೋ ಮಾತು ಕೇಳಿ ಗುಂಡಿ–ಗುಪ್ಪೆ ಹತ್ತಿ ಅಡ್ಡದಾರಿಯಲ್ಲಿ ಹೋಗುವವರು ಹಲವು ಜನ ಇದ್ದಾರೆ. ಇಲ್ಲಿ ನಾವು ಯಾರನ್ನು ಸರಿ ಪಡಿಸಬೇಕು ಅನ್ನೋದೇ ಬಹು ಮುಖ್ಯವಾದ ಸಂಗತಿಯಾಗಿದೆ. ರಸ್ತೆಯ ಸೆರಗಿನಲ್ಲಿ ವಾಹನ ಚಾಲನೆಗೆ ಸಂಬಂಧಿತ ಅನೇಕ ಬೋರ್ಡುಗಳಿವೆ. ಅವು ನಮಗೆ ಸುರಕ್ಷಿತವಾದ ಚಾಲನೆಗೆ ಸಂದೇಶವನ್ನು ನೀಡುವ ದರ್ಶಕವಾಗಿದೆ. ಆದರೆ ಈ ಬೋರ್ಡುಗಳ ತಿಳುವಳಿಕೆ ವಾಹನ ಓಡಿಸುವವನಿಗೆ ಉಂಟೆ?. ಚಿತ್ರದಂತೆ ಹಾದು ಹೋಗುವ ಅನೇಕ ಸೂಚಕ ಬೋರ್ಡುಗಳನ್ನು ದಿನ ನೋಡಿ ಅದರ ಬಗ್ಗೆ ಯಾರಿಗೂ ಲಕ್ಷ್ಯವೇ ಇರುವುದಿಲ್ಲ. ಬಹುತೇಕರು ಇಂದು ವಾಹನ ಚಲಾವಣೆಯ ನಡುವಿನಲ್ಲಿ ಗೂಗಲ್ ಮ್ಯಾಪ್ ಅವಲಂಬಿ ಸಿದ್ದಾರೆ ಇಲ್ಲಿ ಅಂತಹ ಸೂಚನೆಗಳಲ್ಲಿ. ದಾರಿಯನ್ನು ಮಾತ್ರ ಹೇಳುತ್ತದೆ ಅಷ್ಟೆ. ಇಲ್ಲಿ ನಾವು ಪ್ರತಿಯೊಬ್ಬ ಮಕ್ಕಳಿಗೂ ಪಠ್ಯದ ಭಾಗವಾಗಿ ವಾಹನ ಚಾಲನೆಯ ಮೀಮಾಂಸೆ ಯನ್ನು ಬೋಧಿಸುವ ಕೆಲಸ ಮಾಡಬೇಕು ಅದು ಒಂದು ಅಧ್ಯಯನ ವಿಷಯವಾದರೆ ತಿಳುವಳಿಕೆಯು ಅವನಲ್ಲಿ ನೆಲೆಯಾಗುವುದಕ್ಕೆ ಸಾಧ್ಯವಾಗಬಹುದು.



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful
HAMPI TIMES E-paper

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಾವಿರಾರು ಕೋಟಿ ಹಣವನ್ನು ರಸ್ತೆಯ ರಚನೆ ಮತ್ತು ನಿರ್ವಹಣೆಗೆ ಖರ್ಚು ಮಾಡುತ್ತಿವೆ. ನಮ್ಮ ಊರುಗಳೆಲ್ಲ ಹಾದು ಹೋಗಿರುವ ಜಿಲ್ಲಾ, ರಾಜ್ಯ, ರಾಷ್ಟ್ರೀಯ ರಸ್ತೆಗಳ ರಚನೆ, ಅಗಲೀಕರಣ, ಡಾಂಬರೀಕರಣ, ಕಾಂಕ್ರೇಟಿಕರಣಗಳು ಆಗುತ್ತಿರುತ್ತದೆ. ಈ ಸಂಬಂಧ ಅಗೆದ ದರೆ, ತೋಡಿದ ಹೊಂಡ, ಮಾಡಿದ ಕಣಿ, ರಾಶಿ ಹಾಕಿದ ಮಣ್ಣು ಇತ್ಯಾದಿಗಳು ಅಲ್ಲಿಯೇ ಬಿದ್ದಿರುತ್ತವೆ ಈ ಬಗ್ಗೆ ಯಾರು ಗಮನ ಹರಿಸುವುದಿಲ್ಲ. ಇದರಿಂದ ಅಷ್ಟೋ ಮಂದಿ ಕಣಿಗೆ ಉರುಳಿ, ರಾತ್ರಿ ಹೊಂಡಕ್ಕೆ ಬಿದ್ದು, ದರೆಗೆ ಗುದ್ದಿ ಜೀವ ಬಿಟ್ಟಿದ್ದಾರೆ, ತನ್ನವರನ್ನು ಕಳೆದುಕೊಂಡಿದ್ದಾರೆ ಹಾಗೂ ಮಳೆ ಬಂದಾಗ ನೀರು ತುಂಬಿ, ಮಣ್ಣು ಜರಿದು ರಸ್ತೆಯ ರೂಪವೇ ಬದಲಾಗುತ್ತದೆ. ಈ ನಡುವೆ ರಸ್ತೆಯ ರಚನೆಯ ಬಗೆಗೆ ಸರ್ವಜನಿಕರು ಜಾಗೃತವಾಗಬೇಕು. ಸರ್ಕಾರ ಭ್ರಷ್ಟಚಾರ ತಡೆಯಬೇಕಾದ ಅಗತ್ಯತೆ ಉಂಟು. ಇದಕ್ಕಿಂತ ಇನ್ನೊಂದು ವಿಪರ್ಯಸದ ಸಂಗತಿ ಅಂದರೆ ರಸ್ತೆ ನಿರ್ಮಾಣವಾಗಿ, ಬಣ್ಣವೆಲ್ಲ ಬಳಿದು ರಸ್ತೆ ಅಂದರೆ ಕೈ ತೊಳೆದು ಮುಟ್ಟಬೇಕು ಅನ್ನುವಾಗ ಕೇಬಲ್, ನೀರು, ಟೆಲಿಫೋನ್ ಇತ್ಯಾದಿ ಕಂಪೆನಿಯವರು ರಸ್ತೆಯನ್ನು ಅಗೆದು ರಂಪ ಮಾಡಿ ಮತ್ತೆ ತಿಂಗಳು ಗಟ್ಟಲೇ ಹಾಗೆ ಬಿಟ್ಟು ಲಗಾಡಿ ತೆಗೆದ ಮೇಲೆ ತೇಪೆ ಹಾಕಿ ಸರಿ ಪಡಿಸಿದ್ದು ಕಂಡಿದ್ದೇವೆ ಹೀಗೆ ಏಕೆ? ರಸ್ತೆಯ ರಚನೆಯ ಮೊದಲು ಯೋಜನೆ ಇಲ್ಲವೇ?. ಯೋಜನೆ ಇದ್ದರೂ ಅದರ ಬಗ್ಗೆ ಅರಿವಿಲ್ಲದ, ಲಕ್ಷ್ಯವಿಲ್ಲದ ಧೋರಣೆಗಳು ಸರ್ಕಾರದ ಮತ್ತು ಅಧಿಕಾರ ವರ್ಗದಲ್ಲಿ ಇದೆ ಈ ರೀತಿಯ ಮನೋಭಾವ ಬದಲಾಗುವ ಪ್ರಜ್ಞೆಯನ್ನು ನಾವು ಬಿತ್ತಬೇಕಾಗಿದೆ.

ಮನುಷ್ಯನ ಬದುಕಿನ ವಿನ್ಯಾಸವು ಸಂಕೀರ್ಣವಾಗಿದೆ. ವಾಹನಗಳ ಸಂಖ್ಯೆ ಹೆಚ್ಚಾಗಿದೆ, ರಸ್ತೆಗಳು ಗಲ್ಲಿ ಗಲ್ಲಿಯಲ್ಲಿ ರೂಪ ಪಡೆದಿವೆ ಆದರೂ ನಮ್ಮ ಜೀವನದ ವೇಗಕ್ಕೆ ಹೊಂದಿಕೆಯಾಗಿಲ್ಲ. ಮುಂಜಾನೆ ಕಂಡರೇ ಕೆಲಸಕ್ಕೆ ಹೋಗುವ, ಮಕ್ಕಳನ್ನು ಶಾಲೆಗೆ ಬಿಡುವ ತರಾತುರಿ, ಸಂಜೆಯಾದರೆ ಮನೆಗೆ, ಪಾರ್ಟಿಗೆ ಅಲ್ಲಿಗೆ ಇಲ್ಲಿಗೆ ಹೋಗುವ ಅವಸರ ಈ ನಡುವೆ ಮೊಬೈಲ್ ಫೋನಿನ ಮಾತು, ವ್ಯವಹಾರ ಅದು ಇದು ಬಿಟ್ಟು ಇರಲಾಗದಷ್ಟು ನಂಟು ನಮ್ಮಲ್ಲಿ ಜತನವಾಗಿರುವಾಗ ನಾವು ಓಡಿಸುತ್ತಿರುವ ವಾಹನದ ಮೇಲೆ ನಿಗಾ ನಿಲ್ಲುವುದೇ! ರಸ್ತೆಯ ಮೇಲೆ ಪರಿಜ್ಞಾನ ಹುಟ್ಟುವುದೇ? ಸಾಧ್ಯವೇ ಇಲ್ಲ. ಇಂತಹ ಸಂದರ್ಭಗಳು ಅನೇಕ ಅಪಘಾತವನ್ನು ಹುಟ್ಟು ಹಾಕಿವೆ ಮತ್ತು ಅನೇಕ ಸಾವು ನೋವುಗಳಿಗೆ ಕಾರಣವಾಗಿದೆ. ಕುಡಿತ, ಗಾಂಜ ಇತ್ಯಾದಿ ಸೇವನೆ, ಶೋಕಿಗಾಗಿ ಗಾಡಿ ನಡೆಸುವುದು, ಹಣ ಮತ್ತು ಅಧಿಕಾರದ ಅಮಲಿನಲ್ಲಿ ಇರುವ ಅನೇಕ ಮಂದಿ ರಸ್ತೆಯ ನಿಯಮವನ್ನು ಪಾಲಿಸದೆ ಮನ ಬಂದಂತೆ ವಾಹನ ಚಲಾಯಿಸುತ್ತಾರೆ ಈ ನಡುವೆ ಉಂಟಾದ ಅದೆಷ್ಟೋ ಅಪಘಾತಗಳು ಮನುಷ್ಯನ ಬದುಕನ್ನು ಬೆಚ್ಚಿ ಬೀಳಿಸಿದೆ. ನಮ್ಮ ಊರಿನಲ್ಲಿ ರಸ್ತೆಯ ಬದಿಯಲ್ಲಿ ಗೋಬಿ ಅಂಗಡಿ ಹಾಕಿಕೊಂಡು ಬದುಕು ಮಾಡುತ್ತಿದ್ದ ಅವನ ಶ್ರಮದಿಂದ ಅವನ ಕುಟುಂಬ ನಡೆಯುತ್ತಿತ್ತು. ತಂದೆ–ತಾಯಿಗೆ ವಯಸ್ಸು ಮೀರಿ ಅನೇಕ ಖಾಯಿಲೆಗೆ ಒಳಗಾಗಿ ಮಾತ್ರೆಯಲ್ಲಿ ಬದುಕುತ್ತಿದ್ದರು. ಹೆಂಡತಿಗೆ ನಾಲ್ಕನೇಯವಳು ಹುಟ್ಟಿದ ಮೇಲೆ ದೇಹವು ನಿಗ ಕಳೆದುಕೊಂಡಿತ್ತು, ಮಕ್ಕಳನ್ನು ಶಾಲೆಗೆ ಹಾಕಿದ್ದ ಅಷ್ಟೆಲ್ಲದರ ಹಿಂದ ಒಬ್ಬನೇ ಹೆಗಲು ಕಟ್ಟಿದ್ದ ಅವನಿಲ್ಲದೇ ಉಳಿದವರು ಬದುಕಲು ಸಾಧ್ಯವಿರಲಿಲ್ಲ. ಹೀಗಿರುವಾಗ ಅಂದೊಂದು ದಿನ ಬೈಗಿನಲ್ಲಿ ಜೋರಾಗಿ ಬಂದ ಕಾರು ಅಂಗಡಿಗೆ ಹೊಡೆದು ಅವನ ಕಾಲು, ಕೈ, ಸೊಂಟವನ್ನು ಪುಡಿ ಮಾಡಿ ಬಿಟ್ಟಿತು. ಈಗ ಅನಾಥವಾದ ಅವನ ಕುಟುಂಬದ ನೋವು ಬರಿಸುವುದು ಯಾವುದರಿಂದ ಇಂತಹ ನೂರಾರು ಘಟನೆಗಳು ನಮ್ಮ ಮುಂದೆ ನಡೆಯುತ್ತಿರುತ್ತವೆ. ಇದರಿಂದ ಹೊರಕ್ಕೆ ಬರಬೇಕಾದ ಅಗತ್ಯತೆ ಇದೆ. ಇದಕ್ಕಿಂತ ಮುಖ್ಯವಾಗಿ ವಾಹನವನ್ನು ಓಡಿಸುವ ಪ್ರತಿಯೊಬ್ಬರೂ ತನ್ನ ಹಾಗೂ ತನ್ನ ಎದುರಿಗೆ ಬರುತ್ತಿರುವವರ ಜೀವ ಅಮೂಲ್ಯವಾದದ್ದು ಎಂಬ ಪ್ರಜ್ಞೆಯು ಮನಸ್ಸಿನಲ್ಲಿ ಜಾಗೃತವಾದರೆ ರಸ್ತೆಯ ಅಪಘಾತವನ್ನು ತುಸು ತಗ್ಗಿಸಿ ಸಾವು, ನೋವು, ಅನಾಥ ಪ್ರಜ್ಞೆಯನ್ನು ದೂರವಾಗಿಸಬಹು.

# ಭೂಮಿ

ಸೌರವ್ಯೂಹದ ದೊಡ್ಡ ಗ್ರಹ ಭೂಮಿ. ಭೂಮಿ ತಾಯಿಯು ಕೋಟ್ಯಾಂತರ ಜೀವಸಂಕುಲಗಳನ್ನು ತನ್ನ ಮಡಿಲಿನಲ್ಲಿ ಇಟ್ಟುಕೊಂಡು ಆಶ್ರಯ ನೀಡುತ್ತಾ ಸಲಹುತ್ತಿದ್ದಾಳೆ. ಭೂಮಿತಾಯಿಯ ತಾಳ್ಮೆ ಮತ್ತು ಸಹನಾ ಶಕ್ತಿಯ ಮೇಲೆಯೇ ಇಡೀ ಜಗತ್ತು ನಿಂತಿದೆ. ಭೂಮಿಯ ಮೇಲೆ ಜೀವ ಸಂಕುಲಗಳು ಬದುಕಲು ಬೇಕಾಗುವ ಎಲ್ಲಾ ಸೌಲಭ್ಯಗಳು ಇರುವುದರಿಂದ ಇತರ ಗ್ರಹಗಳಿಗಿಂತ ಭೂಮಿಯು ಭಿನ್ನವಾಗಿದೆ. ಜೀವಿಗಳು ಜೀವಿಸಲು ಯೋಗ್ಯವಾಗಿರುವ ಏಕೈಕ ಸ್ಥಳವೆಂದರೆ ಭೂಮಿ. ಹಾಗಾಗಿ ಈ ಭೂಮಿ ನಮ್ಮದು. ಜೀವಿಗಳು ವಾಸಿಸಲು ಬೇಕಾದ ವ್ಯವಸ್ಥಿತ ಪರಿಸರ ಭೂಮಿಯ ಮೇಲಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಮಾನವನು ಭೂಮಿತಾಯಿಯ ಒಡಲನ್ನು ಬಗಿದು ಬರಡು ಮಾಡುತ್ತಿರುವುದು ಶೋಚನೀಯ ಸಂಗತಿ.

ಪರಿಸರ ಎಂದರೆ ನಮ್ಮ ಸುತ್ತಮುತ್ತಲಿನ ವಾತಾವರಣ. ನಮಗೆ ದೈವದತ್ತವಾಗಿಯೇ ಪ್ರಕೃತಿ ಮಾತೆ ಸಮೃದ್ಧಿಯಾಗಿ ದೊರೆತ್ತಿದ್ದಾಳೆ. ಅದನ್ನು ನಾಶಮಾಡದೆ ಉಳಿಸಿ ಬೆಳೆಸಿಕೊಂಡು ಹೋಗುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

ಮನುಷ್ಯನ ದುರಾಸೆಯಿಂದಾಗಿ ಪರಿಸರ ಮಾಲಿನ್ಯ ಮಿತಿಮೀರಿ ಹೋಗುತ್ತಿದೆ. ಕಾಡುಗಳನ್ನು ಕಡಿದು ನಗರೀಕರಣ ಮಾಡುತ್ತಿದ್ದಾರೆ. ಪರಿಸರ ಮಾಲಿನ್ಯದಿಂದಾಗಿ ಭೂಮಿ ತಾಯಿ ತತ್ತರಿಸಿ ಹೋಗಿದ್ದಾಳೆ. ವರ್ಷದಿಂದ ವರ್ಷಕ್ಕೆ ತಾಪಮಾನ,ಜಲಮಾಲಿನ್ಯ,ಆಹಾರ ಮಾಲಿನ್ಯ, ವಾಯುಮಾಲಿನ್ಯ, ,ಶಬ್ದಮಾಲಿನ್ಯ, ಭೂಮಾಲಿನ್ಯ ಬಹಳ ಹೆಚ್ಚಾಗುತ್ತಿದೆ.ಹೀಗೆ ಮುಂದುವರೆದರೆ ಮುಂದಿನ ಪೀಳಿಗೆಗೆ ಒಳ್ಳೆಯ ಪರಿಸರ ಸಿಗುವುದು ಕನಸಿನ ಮಾತಾಗುವುದರಲ್ಲಿ ಆಶ್ಚರ್ಯವಿಲ್ಲ.

ಮಾನವನ ದುರಾಸೆ ಹೆಚ್ಚಾಗಿ ಮರ ಗಿಡಗಳನ್ನು ಕಡಿದು,ಕೆರೆಕುಂಟೆ ಸರೋವರಗಳನ್ನು ಮುಚ್ಚಿ ಕಾಂಕ್ರೀಟ್ ಕಟ್ಟಡಗಳನ್ನು ಕಟ್ಟುತ್ತಿದ್ದಾನೆ. ಇದರಿಂದಾಗಿ ಹಚ್ಚಹಸುರಿನಿಂದ ಕಂಗೊಳಿಸುತ್ತಿದ್ದ ಪ್ರದೇಶಗಳು ಕಾಂಕ್ರೀಟ್ ಮಯವಾಗಿ ಬದಲಾಗುತ್ತಿದೆ. ಮಳೆಯ ನೀರನ್ನು ಭೂಮಿಯಿಂದ ಅಂತರ್ಜಲದ ಮಟ್ಟ ಕಡಿಮೆಯಾಗಿ ಭೂಮಿಯು ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತಿದೆ. ಕೆಲ ಭಾಗದಲ್ಲಿ ನೆಲದಲ್ಲಿ ಸತ್ವವೇ ಇರುವುದಿಲ್ಲ. ಹಾಗಾಗಿ ಬೆಳೆಗಾಗಿ ಬೀಜವನ್ನು ಬಿತ್ತಿದರೆ ಒಣಗಿ ಹೋಗುತ್ತದೆ. ಕಾಲಕಾಲಕ್ಕೆ ಸರಿಯಾಗಿ ಬೆಳೆಯನ್ನು ತೆಗೆಯಲು ಸಾಧ್ಯವಾಗುವುದಿಲ್ಲ.



ಚೇತನ ಭಾರ್ಗವ
ಬೆಂಗಳೂರು ಹವ್ಯಾಸಿ ಬರಹಗಾರ್ತಿ

Scan For Digital Colourful
HAMPI TIMES E-paper

ಈ ಭೂಮಿ ನಮ್ಮದು ಹಾಗಾಗಿ ಭೂಮಿಯನ್ನು ಸಬಲ ಮಾಡುವ ದೃಷ್ಟಿಯಿಂದ ಭೂ ಸುಧಾರಣೆಯ ಅರಿವನ್ನು ಜನರಿಗೆ ಮೂಡಿಸಬೇಕು ಭೂಸುಧಾರಣೆಯಿಂದಲೇ ಮರುಭೂಮಿಕರಣ, ಮರುಭೂಮೀಕರಣದಿಂಲೇ ಬರ ಸ್ಥಿತಿ ಸ್ಥಾಪಕತ್ವ ಸಾಧ್ಯ. ನೆಲದಲ್ಲಿ ನೀರಿನ ಅಂಶವಿಲ್ಲದೆ ನೆಲ ಬಿರಿಬಿಟ್ಟಿದ್ದರೆ ಬರ ಪರಿಸ್ಥಿತಿ ಎದುರಾಗುವುದರ ಮುನ್ಸೂಚನೆಯಾಗಿರುತ್ತದೆ.

ಹಿಂದೆ ಪ್ರಕೃತಿ ಮತ್ತು ಮನುಷ್ಯರ ನಡುವೆ ಸ್ನೇಹ ಸಹಬಾಳ್ವತೆಯ ಮನೋಭಾವವಿತ್ತು. ಪ್ರಕೃತಿಯ ಸೊಬಗನ್ನು ಆಸ್ವಾದಿಸುತ್ತಾ ಋತುಮಾನಕ್ಕೆ ತಕ್ಕಂತೆ ಜೀವನ ಕ್ರಮವನ್ನು ರೂಪಿಸಿಕೊಂಡು ಮನುಷ್ಯನು ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದನು. ತನ್ನ ಅಗತ್ಯಕ್ಕೆ ಎಷ್ಟು ಬೇಕೋ ಅಷ್ಟನ್ನು ಉಪಯೋಗಿಸಿ ದುಂದು ವೆಚ್ಚ ಮಾಡದೆ ಸಂಪನ್ಮೂಲಗಳ ಮರುಪೂರಣ ವ್ಯವಸ್ಥೆಗೆ ಸಮಯವನ್ನು ಕೊಟ್ಟು ನೀ ಎನಗಿದ್ದರೆ ನಾ ನಿನಗೆ ಎಂಬ ಭಾವದಲ್ಲಿ ಬದುಕುತ್ತಿದ್ದನು. ಪ್ರಕೃತಿಯನ್ನು ಜೀವದಾಯಿನಿ ಎಂದು ಪೋಷಿಸುತ್ತಾ ಪೂಜಿಸುತ್ತಿದ್ದನು. ಸುತ್ತಮುತ್ತಲಿನ ಪರಿಸರ ಮತ್ತು ಪ್ರಕೃತಿಯನ್ನು ಸ್ವಚ್ಛವಾಗಿಡುತ್ತಿದ್ದನು ಹಾಗೂ ಮಾಲಿನ್ಯ ಮಾಡುತ್ತಿರಲಿಲ್ಲ

ಪ್ರಕೃತಿಯ ವಿನಾಶದಿಂದಾಗಿ ಪ್ರಸನ್ನವದನೆಯಾಗಿದ್ದ ಪ್ರಕೃತಿ ಮಾತೆಯು ಮುನಿಸಿಕೊಂಡಿದ್ದಾಳೆ. ಇದರಿಂದ ಅತಿವೃಷ್ಟಿ ಅನಾವೃಷ್ಟಿ ಕಾಳ್ಗಿಚ್ಚು ಅಗ್ನಿ ಪರ್ವತದ ಸ್ಫೋಟ ಭೂಕಂಪ ಹೀಗೆ ಮುಂತಾದ ಹಲವಾರು ಪ್ರಕೃತಿ ವಿಕೋಪಗಳು ಸಂಭವಿಸುತ್ತಿವೆ.



ಭೂಮಿತಾಯಿ ಹಾಗೂಪ್ರಕೃತಿಯು ಮುನಿಸಿಕೊಂಡರೆ ಧರೆಯೇ ಹತ್ತಿ ಉರಿದಂತೆ ಇನ್ನು ಮನುಷ್ಯ ಹೇಗೆ ಬದುಕಲು ಸಾಧ್ಯ ಇದನ್ನು ಮನುಷ್ಯ ಅರಿಯದುದೆ ವಿಪರ್ಯಾಸವಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಮನುಷ್ಯನಿಗೆ ಉಸಿರಾಡಲು ಶುದ್ಧವಾದ ಆಮ್ಲಜನಕ ಸಿಗುತ್ತಿಲ್ಲ. ಬೇಸಿಗೆ ಶುರುವಾಗುವ ಮೊದಲೇ ಎಲ್ಲೆಡೆ ನೀರಿಗಾಗಿ ಹಾಹಾಕಾರ ಶುರುವಾಗಿದೆ. ಕುಡಿಯಲು ಶುದ್ಧ ನೀರು ಸಿಗುತ್ತಿಲ್ಲ. ನದಿಗಳಿಗೆ ಮಣ್ಣಿಗೆ ರಾಸಾಯನಿಕ ವಸ್ತುಗಳು ಮಿಶ್ರಣಗೊಂಡು ಇಡೀ ಪರಿಸರ ವಿಷಮಯವಾಗಿದೆ. ಅಂತರ್ಜಲವು ಬತ್ತುತ್ತಿದೆ. ನದಿಗಳು ಮಳೆ ಇಲ್ಲದೆ ಒಣಗುತ್ತಿವೆ. ಅದೇ ಇನ್ನೊಂದಡೆ ಮಳೆ ಬೀಳದ ಪ್ರದೇಶಗಳಲ್ಲೂ ಅತಿವೃಷ್ಟಿ ಆಗುತ್ತಿದೆ. ಹೀಗೆ ಗಾಳಿ ನೀರು ಆಹಾರದಂತ ಮೂಲಭೂತ ವಸ್ತುಗಳೇ ಸಿಗದೇ ಇದ್ದಾಗ ಮನುಷ್ಯ ಬಾಳಲು ಸಾಧ್ಯವಿಲ್ಲ. ಈ ಎಲ್ಲಾ ಅವಘಡಗಳಿಗೆ ಮನುಷ್ಯನ ದುರಾಸೆಯೇ ಕಾರಣ. .ಪ್ರಾಣಿ ವರ್ಗದಲ್ಲೇ ಶ್ರೇಷ್ಠನೆನಿಸಿಕೊಳ್ಳುವ ಮಾನವನು ತನ್ನ ಜವಾಬ್ದಾರಿಯನ್ನು ಅರಿತು ಈ ಭೂಮಿಯು ನಮ್ಮದು ಎಂಬ ಪರಿಜ್ಞಾನವನ್ನು ಇಟ್ಟುಕೊಂಡು ಪ್ರಕೃತಿಯನ್ನು ಸಲುಹಿ ಗಿಡ ಮರ ಪ್ರಾಣಿ ಪಕ್ಷಿಗಳ ಉಳಿವಿಗೆ ಪಣತೊಡಬೇಕಾಗಿದೆ.

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆಹತ್ತಿ ಉರಿದಡೆ ನಿಲಲು ಬಾರದು

ಎಂದು ಬಸವಣ್ಣನವರು ತಮ್ಮ ವಚನದಲ್ಲಿ ಹೇಳಿದ್ದಾರೆ. ವ್ಯಕ್ತಿಯು ಕಾಪಾಡಿಕೊಳ್ಳಬೇಕಾದ ವಸ್ತುಗಳನ್ನು ತಾನೇ ಸ್ವತ: ನಾಶಪಡಿಸಿದರೆ, ರಕ್ಷಕನು ಭಕ್ಷಕನಾದರೆ ಏನು ಮಾಡಲು ಸಾಧ್ಯವಿಲ್ಲ ಎಂಬ ಸತ್ಯವನ್ನು ರೂಪಕಗಳ ಮೂಲಕ ತಿಳಿಸಿದ್ದಾರೆ. ಒಲೆಯಲ್ಲಿ ಉರಿಯುತ್ತಿದ್ದ ಬೆಂಕಿಯು ಧಗ್ ಎಂದು ಹೊತ್ತಿಕೊಂಡು ಹೊರಗೆಲ್ಲ ಉರಿಯಲು ಶುರು ಮಾಡಿದರೆ ಒಲೆಯಿಂದ ದೂರ ನಿಂತು ಬೆಂಕಿಯ ಝಳದಿಂದ ಪಾರಾಗಬಹುದು ಆದರೆ ಇಡೀ ಜಗತ್ತೇ ಹೊತ್ತಿಕೊಂಡು ಉರಿಯುವ ಸಮಯ ಬಂದಾಗ ಆ ಬೆಂಕಿಯ ತಾಪದಿಂದ ಪಾರಾಗಲು ಸಾಧ್ಯವೇ ಇಲ್ಲ. ವಿಧಿ ಇಲ್ಲದೆ ಆ ಉರಿಯಲ್ಲಿ ಸುಟ್ಟು ಕರಕಲಾಗಬೇಕಾಗುತ್ತದೆ. ಹಾಗಾಗಿ ಸಂಪನ್ಮೂಲಗಳನ್ನು ರಕ್ಷಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಆದರೆ ಮನುಷ್ಯನ ದುರಾಸೆ, ಕೊಳ್ಳುಬಾಕತನ, ವಿಲಾಸಿ ಜೀವನ ಕ್ರಮ, ವ್ಯಾಮೋಹಕ್ಕೆ ಬಿದ್ದು ದುರ್ಬಳಕೆ ಮಾಡಿಕೊಂಡರೆ ವಿನಾಶ ಸಂಭವಿಸುತ್ತದೆ ಎಂದು ಅಂದೇ ಬಸವಣ್ಣನವರು ಸೂಚ್ಯವಾಗಿ ತಿಳಿಸಿದ್ದರು. ನಮ್ಮ ಭೂಮಿಯನ್ನು ನಾವು ರಕ್ಷಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಪ್ಲಾಸ್ಟಿಕ್ ಇಡ್ಲಿಯಾಗೋದು ಬೇಡ!...

ಮಕ್ಕಳಿಗೆ ಪ್ರಿಯವಾದ ಹಿರಿಯರಿಗೆ
ಸವಿಯಾದ....
ಗುಣದಲ್ಲಿ ಮೃದುವಂತನಾದ....
ಸಾಂಬಾರಿಗೊಂದುವ, ಚಟ್ನಿಗೆ ರುಚಿ
ಪಡೆವ...
ಮುದ್ದಾದ ನಿನ ಹೆಸರು ಇಡ್ಲಿರಾಯ....

ವಡೆಯಾ ಗೆಳೆಯನು,ಹಿತವಾಗಿರುವನು
ತಿಂದರೆ ಮತ್ತೆರಡು ತಿನಿಸಿಕೊಳ್ಳುವವನು
ರೋಗಿಗಳಿಗೆ ಸೂಕ್ತನು, ಪಥ್ಯವಲ್ಲದವನು
ತಟ್ಟೆ ಇಡ್ಲಿ, ಮಲ್ಲಿಗೆ ಇಡ್ಲಿ ವಿವಿಧ
ಹೆಸರಿನವನು....

ಸಕಲರಾಹಾರವ ಪ್ಲಾಸ್ಟಿಕಲಿ ಬೇಯಿಸುವ....
ಮೂರ್ಖ ಬುದ್ಧಿಯು ಏಕೋ ನಿನಗೆ
ಮನುಜ....
ನೀನೂ ತಿನ್ನುವೆ, ಮಕ್ಕಳಿಗೂ ತಿನಿಸುವೆ....
ಮರೆಯಬೇಡೋ ಅಣ್ಣ ಇರು ಎಚ್ಚರ!

ಆಹಾರವೆಂಬುದು ಉದರ ತೃಪ್ತಿಗೆ ಅಲ್ಲ
ವ್ಯಾಪಾರವೆಂಬುದು ಬರೀ ಹಣ ಗಳಿಕೆಗಲ್ಲ
ಇರಲಿ ಮನುಜತೆಯ ಕಳಕಳಿ ಇನಿತು
ಇದರಿಂದಾದೀತು ಸಕಲರಿಗೂ ಒಳಿತು

ಕೈ ಮುಗಿದು ಬೇಡುವೆ ನಿಮ್ಮ ದಮ್ಮಯ್ಯ...
ಹತ್ತಿ ಬಟ್ಟೆಯ ಬಳಸಿ ಇಡ್ಲಿಯ
ಮಾಡಿರಯ್ಯಾ!
ಇಡ್ಲಿ ಇಡ್ಲಿಯಾಗಿರಲಿ, ಪ್ಲಾಸ್ಟಿಕ್
ಇಡ್ಲಿಯಾಗೋದು ಬೇಡ!
ಕ್ಯಾನ್ಸರ್ ರೋಗಕೆ ಇದುವು ಕಾರಣವು
ನೋಡ!....

ಊಟ ನೀಡುವ ತಟ್ಟೆಯೊಳಗೂ ಪ್ಲಾಸ್ಟಿಕ್
ಹಾಳೆ....
ಬೇಡ ಬೇಡವೋ ಅಣ್ಣಾ ಇಷ್ಟು ಆಲಸ್ಯ...
ಕಾಯಕವೇ ಕೈಲಾಸ, ಅರಿತು ನಡೆಯಲು
ಬೇಕು....
ಇದುವೇ ತಾನೇ ಅಣ್ಣಾ ನಿತ್ಯ ಸತ್ಯ....

– ಶೇಖರಯ್ಯ ಟಿ ಎಚ್ ಎಂ
ಗೆದ್ದಲಗಟ್ಟೆ.

# ಗುಡ್ಡಗಾಡಿನಲ್ಲಿ ಕೃಷಿ ಮಾಡಿ ಯಶಸ್ಸು ಕಂಡ ರೈತ ಮಹಿಳೆ

## ಸಾವಯವ ಕೃಷಿಯಲ್ಲಿ ಸಾಧನೆಗೈದ ಗಂಗೂಬಾಯಿ ಅವರು ರೈತರಿಗೆ ಮಾದರಿ



■ ಹಂಪಿ ಟೈಮ್ಸ್ ಬಳ್ಳಾರಿ

ಗುಡ್ಡಗಾಡು ಪ್ರದೇಶದಲ್ಲಿ ವಾಸ ಮಾಡುವುದೇ ಕಷ್ಟಸಾಧ್ಯವಿರುವಾಗ ಅಂತಹ ಪ್ರದೇಶದಲ್ಲಿ ಕೃಷಿಯಲ್ಲಿ ತೊಡಗಿಸಿಕೊಳ್ಳುವುದು ವಿಪರ್ಯಾಸವೇ ಸರಿ. ಇದಕ್ಕೆ ನಿದರ್ಶನವಾಗಿ ಬಳ್ಳಾರಿ ತಾಲ್ಲೂಕಿನ ಹೊನ್ನಳ್ಳಿ ತಾಂಡ ಪುಟ್ಟ ಗ್ರಾಮದ ಪ್ರತಿಭಾನ್ವಿತ ರೈತ ಮಹಿಳೆ ಗಂಗೂಬಾಯಿ ಗಂಡ ತಿರುಪತಿನಾಯ್ಕ.

ಇವರು ಬಳ್ಳಾರಿ ಸಮೀಪದ ಹೊನ್ನಳ್ಳಿ ತಾಂಡ ಗ್ರಾಮದಲ್ಲಿ ಸರಿಸುಮಾರು 4.5 ಎಕರೆಯ ಭೂಮಿ ಹೊಂದಿದ್ದು, ಇವರಿಗೆ ತಮ್ಮ ಮನೆಯ ಸುತ್ತ ಮುತ್ತ ಏನಾದರೂ ಉತ್ಪಾದಕ ಕೆಲಸ ಮಾಡಬೇಕೆಂಬ ಛಲ ಹೊಂದಿದ್ದರು. ತಮ್ಮ ಬರಡಾಗಿರುವ ಜಮೀನಿನಲ್ಲಿ ತೋಟಗಾರಿಕೆ ಹಾಗೂ ಕೃಷಿಯನ್ನು ಅಳವಡಿಸಿಕೊಂಡು ಭೂಮಿಯನ್ನು ಸಾವಯವ ಕೃಷಿ ಭೂಮಿಯಾಗಿ ಬದಲಾಯಿಸಬೇಕೆಂದು ಅರಿತ ಇವರು ತಮ್ಮ ಜಮೀನು ಸುತ್ತಲೂ ತಂತಿ ಬೇಲಿ ಹಾಕಿ ಭದ್ರಪಡಿಸಿಕೊಂಡರು.

ತಮ್ಮ ಜಮೀನಿನಲ್ಲಿ ವಿವಿಧ ಹಣ್ಣಿನ ಬೆಳೆಗಳಾದ 600 ನಿಂಬೆ, 700 ಪೇರಲ, 1600 ಡ್ರ್ಯಾಗನ್ ಹಾಗೂ 2 ಎಕರೆಯಲ್ಲಿ ಕರಿಬೇವು ಗಿಡ ಮತ್ತು ಆತ್ಮ ಯೋಜನೆಯ ಪ್ರಾತ್ಯಕ್ಷಿಕೆಯಡಿ 10 ಬಿದಿರು ಸಸಿಗಳನ್ನು ಪಡೆದು ಹೊಲದ ಸುತ್ತಲೂ ನೆಟ್ಟಿದ್ದಾರೆ. ಇದಲ್ಲದೆ, ಪಶು ಸಂಗೋಪನೆಯು ಕೈಗೊಂಡಿದ್ದು, 02 ಹಸು, 01 ಎತ್ತು ಹಾಗೂ 01 ಎಮ್ಮೆ ಇದೆ. ಕೋಳಿ ಸಾಕಾಣಿಕೆಯಲ್ಲೂ (30 ಕೋಳಿ) ಮೇಲುಗೈ ಹೊಂದಿದ್ದಾರೆ. 100 ಕುರಿ, 25 ಮೇಕೆ, ಆಡುಗಳನ್ನು ಸಹ ಹೊಂದಿದ್ದಾರೆ.

ಇವರು ತಮ್ಮ ಹೊಲದಲ್ಲಿ ನೀರಿನ ಕೊರತೆ ಬಾರದಂತೆ ಕೃಷಿ ಹೊಂಡ (21*21*3.5ಮೀ) ನಿರ್ಮಿಸಿದ್ದು, ಹೊಲದಲ್ಲಿ ತಮ್ಮ ಗಿಡಗಳು ಸಾವಯವವಾಗಿ ಬೆಳೆಯಲು ಎರೆಹುಳು ಘಟಕವನ್ನು ನಿರ್ಮಿಸಿ ಎರೆಹುಳು ಗೊಬ್ಬರವನ್ನು ತಯಾರಿಸುತ್ತಾರೆ.

ಗೋಕೃಪಾಮೃತ, ದಶಪಾಣಿಯನ್ನು ಸ್ವತಃ ತಯಾರಿಸಿ ತಮ್ಮ ಹೊಲದಲ್ಲಿರುವ ಗಿಡಗಳಿಗೆ ಹನಿ ನೀರಾವರಿ ಪದ್ಧತಿ ಉಪಯೋಗಿಸಿಕೊಂಡು ಸಾವಯವವಾಗಿ ಬೆಳೆಯುತ್ತಿದ್ದಾರೆ ಗಂಗೂಬಾಯಿ ಅವರು ಹಾಗೂ ತಮ್ಮ ಊರಿನ ಸುತ್ತಮುತ್ತಲಿನ ರೈತರಿಗೆ ಮಾದರಿಯಾಗಿದ್ದಾರೆ.

# ಬಿಇ,ಬಿಟೆಕ್ ಎಸ್ಸಿ ಪದವೀಧರರಿಗೆ ವೃತ್ತಿಪರ ತರಬೇತಿಗೆ ಅರ್ಜಿ ಅಹ್ವಾನ

■ ಹಂಪಿ ಟೈಮ್ಸ್ ಹೊಸಪೇಟೆ

2024–25ನೇ ಸಾಲಿನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್ಸಿ), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಮತ್ತು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎನ್‌ಐಟಿ) ಸಂಸ್ಥೆಗಳ ಮೂಲಕ ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆ (ಅರ್ಟಿಫಿಸಿಯಲ್ ಇಂಟೆಲಿಜೆನ್ಸಿ ಮತ್ತು ಮೆಷಿನ್ ಲರ್ನಿಂಗ್) ಕೋರ್ಸ್‌ಗಳಲ್ಲಿ ಭಾಗವಹಿಸುವ 200 ಇಂಜಿನಿಯರಿಂಗ್ ಎಸ್ಸಿ ಪದವಿಧರರಿಗೆ ರೂ.15000 ಶಿಷ್ಯವೇತನ ಹಾಗೂ ತರಬೇತಿ ನೀಡಲಾಗುವುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಾಷು ಮೊಹಿದ್ದೀನ್ ತಿಳಿಸಿದ್ದಾರೆ.

ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ವಿಜಯನಗರ ಜಿಲ್ಲೆಯ ಮೂಲನಿವಾಸಿ ಮತ್ತು ಅಲೆಮಾರಿ, ಅರೆಅಲೆಮಾರಿ ಮತ್ತು ಸೂಕ್ಷ್ಮ, ಅತಿ ಸೂಕ್ಷ್ಮ ಪರಿಶಿಷ್ಟ ಪಂಗಡದ ಯುವಕ, ಯುವತಿಯರಿಗೆ ಅರ್ಟಿಫಿಸಿಯಲ್ ಇಂಟೆಲಿಜೆನ್ಸ್ ಮತ್ತು ಮೆಷಿನ್ ಲರ್ನಿಂಗ್ ತರಬೇತಿ ನೀಡಲಾಗುವುದು. ಇದೇ ಏಪ್ರಿಲ್ 25 ರೊಳಗಾಗಿ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದಿರುವ ವಿಶ್ವವಿದ್ಯಾಲಯಗಳಲ್ಲಿ ಬಿಇ, ಬಿಟೆಕ್ ಕೋರ್ಸ್ ಗಳನ್ನು ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಶಿಷ್ಯವೇತನಕ್ಕೆ ಅರ್ಹರಾಗಿರುತ್ತಾರೆ. ಅಭ್ಯರ್ಥಿಯು ಬಿಇ, ಬಿಟೆಕ್ ಕೋರ್ಸ್‌ಗಳಲ್ಲಿ ಕನಿಷ್ಠ ಶೇ.55 ರಷ್ಟು ಕಡ್ಡಾಯವಾಗಿ ಅಂಕ ಗಳಿಸಿರಬೇಕು. ಕೋರ್ಸ್ ನ ಅವಧಿಯು ಗರಿಷ್ಠ ಎರಡು ವಾರಗಳಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಹಾಗೂ ಆಯಾ ತಾಲೂಕಿನ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ ಕಚೇರಿಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೊಟ್ಟೂರು ಪಟ್ಟಣ ಅಭಿವೃದ್ಧಿಗೆ ಸಿದ್ಧ

## ಶಾಸಕ ನೇಮಿರಾಜನಾಯ್ಕ ಹೇಳಿಕೆ | 2.75 ಕೋಟಿ ರೂ.ವೆಚ್ಚದಲ್ಲಿ ಸಿ.ಸಿ.ಚರಂಡಿ ನಿರ್ಮಾಣಕ್ಕೆ ಭೂಮಿ ಪೂಜೆ




■ ಹಂಪಿ ಟೈಮ್ಸ್ ಕೊಟ್ಟೂರು

ಕೊಟ್ಟೂರು ಪಟ್ಟಣದ ಸರ್ವತೋಮುಖವಾಗಿ ಅಭಿವೃದ್ಧಿಗೆ ಕಂಕಣಬದ್ಧನಾಗಿ ಕಾರ್ಯ ನಿರ್ವಹಿಸುವೆ ಎಂದು ಶಾಸಕ ನೇಮಿರಾಜ ನಾಯ್ಕ ಹೇಳಿದರು.

ಮಂಗಳವಾರ ಇಲ್ಲಿನ 4,7,8 ಮತ್ತು 11,16,18 ನೇ ವಾರ್ಡ್ ಗಳಲ್ಲಿ ಒಟ್ಟು 2.75 ಕೋಟಿ ರೂ ವೆಚ್ಚದಲ್ಲಿ ಸಿ.ಸಿ ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಭೋಮಿ ಪೂಜೆ ಕಾರ್ಯ ನೆರವೇರಿಸಿ ಮಾತನಾಡಿದರು.

ಡಿಎಮ್‌ಎಫ್ ಮತ್ತು ಕೆ.ಕೆ.ಆರ್.ಡಿ.ಬಿ ಹಾಗೂ ಕೇಂದ್ರದ ಅನುದಾನದಿಂದ ತಮ್ಮ ಅವಧಿಯೊಳಗೆ ಪಟ್ಟಣದಲ್ಲಿ 10 ವರ್ಷಗಳಿಂದ ನೆನಗುದಿಗೆ ಬಿದ್ದಂತ ಮೂಲಭೂತ ಸೌಲಭ್ಯಗಳ ಕಾಮಗಾರಿಗಳನ್ನು ಸಂಪೂರ್ಣ ಪೂರೈಸುವುದಾಗಿ ಭರವಸೆ ನೀಡಿದರು.

ಭೂಮಿ ಪೂಜೆ ವೇಳೆ ಮಾಜಿ ಜಿಪಂ ಸದಸ್ಯರು ಎಂಎಂಜೆ ಹರ್ಷವರ್ಧನ, ಪಪಂ ಅಧ್ಯಕ್ಷೆ ಬದ್ದಿ ರೇಖಾ ರಮೇಶ್, 4ನೇ ವಾರ್ಡ್ ಸದಸ್ಯರು ತೋಟದ ರಾಮಣ್ಣ, ಮುಖಂಡ ಮೂಗಣ್ಣ, ಪಪಂ ಸದಸ್ಯರಾದ ಬೋರವೆಲ್ ತಿಪ್ಪೇಸ್ವಾಮಿ, ಬಾವಿಕಟ್ಟಿ ಶಿವಾನಂದ, ಮೊರಬದ ಕೊಟ್ರೇಶ್, ಡಿಎಸ್ಸೆಸ್ ಮುಖಂಡ ಬದ್ದಿ ಮರಿಸ್ವಾಮಿ,ಎಂಎಂಜೆ ಶೋಭಿತ್, ಅಟವಾಳಗಿ ಸಂತೋಷ, ದಲ್ಲಾಲಿ ಅಂಗಡಿ ಕಾರ್ತಿಕ್, ಜೆಡಿಎಸ್ ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ್, ಸುಧಾಕರ ಗೌಡ್ರು,ಕಡ್ಲಿ ವೀರೇಶ್ ಇನ್ನು ಅನೇಕರು ಹಾಜರಿದ್ದರು.

# ಶಕ್ತಿ ಸದನ ಮತ್ತು ಶಿಶು ಪಾಲನಾ ಕೇಂದ್ರ ತೆರೆಯಲು ಸಂಸ್ಥೆಗಳಿಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲಾ ಕೇಂದ್ರದಲ್ಲಿ ಎರಡು ಶಿಶುಪಾಲನ ಕೇಂದ್ರ ಮತ್ತು ಕೊಟ್ಟೂರು ಪಟ್ಟಣದಲ್ಲಿ ಒಂದು ಶಿಶುಪಾಲನ ಕೇಂದ್ರ ಸೇರಿದಂತೆ ಜಿಲ್ಲಾಕೇಂದ್ರದಲ್ಲಿ ಶಕ್ತಿ ಸದನ ತೆರೆಯಲು ಅರ್ಹ ಸ್ವಯಂ ಸೇವಾ ಸಂಸ್ಥೆಗಳಿಗೆ ಅರ್ಜಿ ಅಹ್ವಾನಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಶ್ವೇತಾ ತಿಳಿಸಿದ್ದಾರೆ.

ಜಿಲ್ಲೆಯ ಎರಡು ಪ್ರಮುಖ ಕಚೇರಿಗಳಲ್ಲಿ ದುಡಿಯುವ ಮಹಿಳೆಯರಿಗಾಗಿ ಅನುಕೂಲವಾಗುವಂತೆ ಶಿಶುಪಾಲನ ಕೇಂದ್ರಗಳನ್ನು ತೆರೆಯಲು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಚಿಕ್ಕಮಕ್ಕಳಿಗೆ ಹಾಲುಣಿಸುವುದು ಹಾಗೂ ಇತರ ಪೋಷಣೆಗೆ ಸಂಬಂಧಿಸಿದಂತೆ ಕೆಲಸ ನಿರ್ವಹಿಸುವ ಮಹಿಳೆಯರಿಗೆ ಶಿಶುಪಾಲನ ಕೇಂದ್ರ ಅಗತ್ಯವಿದ್ದು, ಕೊಟ್ಟೂರು ಪಟ್ಟಣದಲ್ಲಿ ಸಹ ಒಂದು ಶಿಶು ಪಾಲನ ಕೇಂದ್ರ ಸೇರಿ ಒಟ್ಟು ಮೂರು ಕೇಂದ್ರಗಳನ್ನು ತೆರೆಯಲು ಹಾಗೂ ಕೌಟುಂಬಿಕ ಹಿಂಸೆಯಿಂದ ದೌರ್ಜನ್ಯಕ್ಕೊಳಗಾದ 50 ಜನ ಮಹಿಳೆಯರಿಗೆ ಉಚಿತ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಕಲ್ಪಿಸಲು ಅರ್ಹ ಸ್ವಯಂ ಸೇವಾ ಸಂಸ್ಥೆಗಳಿಂದ ಅರ್ಜಿ ಅಹ್ವಾನಿಸಲಾಗಿದೆ. ಆಸಕ್ತ ಸ್ವಯಂ ಸೇವಾ ಸಂಸ್ಥೆಗಳು ಮೇ.2 ರೊಳಗಾಗಿ ಸಂಸ್ಥೆಯ ಅಗತ್ಯ ದಾಖಲಾತಿಗಳೊಂದಿಗೆ ಪ್ರತ್ಯೇಕವಾಗಿ ಕಚೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ : ಜಿಲ್ಲಾ ಉಪನಿರ್ದೇಶಕರ ಕಚೇರಿ, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹೊಸಪೇಟೆ. ದೂ.08394–223583 ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

23–04–2025 – ಬುಧವಾರ

| | |
|---|---|
| ತಿಥಿ | : ದಶಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಧನಿಷ್ಠ |
| ಯೋಗ | : ಶುಕ್ಲ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:00:52 |
| ಸೂರ್ಯಾಸ್ತ | : 18:49:51 |
| ರಾಹು ಕಾಲ | : 12:25–14:01 |
| ಯಮಘಂಡ ಕಾಲ | : 07:37–09:13 |
| ಗುಳಿಕ ಕಾಲ | : 10:49–12:25 |

# ಡಾ.ರಾಜ್ ಕುಮಾರ್ ಜನ್ಮದಿನಾಚರಣೆ ಚಿತ್ರಗೀತೆಗಳ ಗಾಯನ ಕಾರ್ಯಕ್ರಮ

■ ಹಂಪಿ ಟೈಮ್ಸ್ ಬಳ್ಳಾರಿ



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಡಾ.ರಾಜ್ ಕುಮಾರ್ ಜನ್ಮದಿನಾಚರಣೆ ಅಂಗವಾಗಿ ಏ.24 ರಂದು ಸಂಜೆ 05.30 ಗಂಟೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಡಾ.ರಾಜ್ ಕುಮಾರ್ ಅವರ ಕುರಿತ ಕನ್ನಡ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಡಾ.ರಾಜ್ ಕುಮಾರ್ ಅವರ ಅಭಿಮಾನಿಗಳು, ಕನ್ನಡ ಕಲಾಪ್ರೇಮಿಗಳು, ಕಾಲೇಜು ವಿದ್ಯಾರ್ಥಿಗಳು, ಅಧಿಕಾರಿ–ಸಿಬ್ಬಂದಿ ವರ್ಗದವರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ತಿಳಿಸಿದೆ.


# ಏ.24 ರಿಂದ ಎರಡನೇ ಹಂತದ ದ್ವಿತೀಯ ಪಿಯುಸಿ ಪರೀಕ್ಷೆ: ನಿಷೇಧಾಜ್ಞೆ ಜಾರಿ

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ಜಿಲ್ಲೆಯಾದ್ಯಂತ ಏ. 24 ರಿಂದ ಮೇ 8 ರವರೆಗೆ ನಡೆಯುವ ಎರಡನೇ ಹಂತದ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆ ನಿಮಿತ್ತ ಪರೀಕ್ಷಾ ಕೇಂದ್ರಗಳ ಸುತ್ತಲು 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶ ಎಂದು ಘೋಷಿಸಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

ಎರಡನೇ ಹಂತದ ದ್ವಿತೀಯ ಪಿಯುಸಿ ಪರೀಕ್ಷೆಯು ಏ. 24 ರಿಂದ ಮೇ 8 ರ ವರೆಗೆ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಕೊಪ್ಪಳ ಜಿಲ್ಲೆಯ ಒಟ್ಟು 8 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು, ಪರೀಕ್ಷೆಗಳನ್ನು ಸುಗಮ ಮತ್ತು ಶಾಂತಿಯುತವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಅಂತರದ ಪ್ರದೇಶದಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163 >>4

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 22–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.42 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 345 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.954 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1578.57 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 177 ಕ್ಯುಸೆಕ್ |
| ಸಾಮರ್ಥ್ಯ | 3.817 ಟಿಎಂಸಿ |

# ಜನಿವಾರ ತೆಗೆಸಿದ್ದು ಖಂಡಿಸಿ ಪ್ರತಿಭಟನೆ



■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ಹಗರಿಬೊಮ್ಮನಹಳ್ಳಿ ತಾಲೂಕ ಬ್ರಾಹ್ಮಣ ಸಂಘವು ಸಿಇಟಿ ಪರೀಕ್ಷೆ ಸಮಯದಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣವನ್ನು ಖಂಡಿಸಿ, ಮಂಗಳವಾರ ಹಗರಿ ಬೊಮ್ಮನಹಳ್ಳಿ, ಕುರುದುಗಡ್ಡೆ ಯಲ್ಲಿರುವ ಬ್ರಾಹ್ಮಣ ಸಮುದಾಯ ಭವನದಿಂದ ತಾಲೂಕ ದಂಡಾಧಿಕಾರಿಗಳ ಕಚೇರಿಗೆ ತಲುಪಿ ಉಪ ತಹಸಿಲ್ದಾರ್ ಶಿವಕುಮಾರ್‌ಗೆ ಮನವಿ ಪತ್ರವನ್ನು ಸಲ್ಲಿಸಿತು.

ಮಹಿಳಾ ಮುಖಂಡರಾದ ಪದ್ಮ ವಿಠಲ್, ಬ್ರಾಹ್ಮಣ ಸಂಘದ ಸದಸ್ಯರಾದ ಜಿ ಲಿಂಗೂ ಮತ್ತು ಕೆ ರಾಘವೇಂದ್ರ ರಾವ್ ಮಾತನಾಡಿ, ಜನಿವಾರ ತೆಗೆಸಿ ಬ್ರಾಹ್ಮಣ ಸಮುದಾಯವನ್ನು ಅವ ಮಾನಗೊಳಿಸಿದ್ದನ್ನು ಖಂಡಿಸಿದರು.

ಹಗರಿಬೊಮ್ಮನಹಳ್ಳಿ ತಾಲೂಕ ಬ್ರಾಹ್ಮಣ ಸಂಘದ ಗೌರವ ಅಧ್ಯಕ್ಷರು ವಿನಯ ಸಿಂಹ, ಕಾರ್ಯದರ್ಶಿ ಗಿರೀಶ್, ಮಾಜಿ ಪುರಸಭಾ ಸದಸ್ಯ ಸುಭಾಷ್ ಸಾಗರ್, ಹಗರಿಬೊಮ್ಮನಹಳ್ಳಿ ತಾಲೂಕ ಬ್ರಾಹ್ಮಣ ಸಂಘದ ಚಂದ್ರಶೇಖರ್ ಭಟ್, ಸರ್ವ ಸದಸ್ಯರು ಹಾಗೂ ಭೀಮೇಶ ಕೃಷ್ಣ ಭಜನಾ ಮಂಡಳಿ ಅಧ್ಯಕ್ಷರಾದ ಸುಮಿತ್ರ ಸಾಗರ್ ಹಾಗೂ ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕ ಸರ್ಕಾರ
**ಮೀನುಗಾರಿಕೆ ಇಲಾಖೆ**
**ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ,**
**ತಾಲ್ಲೂಕು ಪಂಚಾಯತ್ ಆವರಣ, ಹರಪನಹಳ್ಳಿ–583131**

ಸಂಖ್ಯೆ:ವಾಹೊಗು/01/2024–25 ದಿನಾಂಕ:11/04/2025

**ಮರು ಟೆಂಡರ್ ಪ್ರಕಟಣೆ**

ಮೀನುಗಾರಿಕೆ ಸಹಾಯಕ ನಿರ್ದೇಶಕರು ಹರಪನಹಳ್ಳಿ ತಾಲ್ಲೂಕು ಕಛೇರಿಯ ಉಪಯೋಗಕ್ಕಾಗಿ 2025–26ನೇ ಸಾಲಿನ ಅವಧಿಗೆ ದಿನಾಂಕ: 01/04/2025 ರಿಂದ 31/03/2026 ರವರೆಗೆ 2024 ರ ನಂತರದ ಮಾಡೆಲ್‌ನ ಒಂದು ಸುಸಜ್ಜಿತವಾದ ಹಾಗೂ ಉತ್ತಮ ಸ್ಥಿತಿಯಲ್ಲಿರುವ ಮಹೇಂದ್ರ ಬೋಲೆರೋ ಅಥವಾ / ಟಾಟಾ ಬೋಲ್ಟ್ / ಇಂಡಿಗೋ / ಟೋಯೋಟೋ ಇಟಿಯೋಸ್ / ಮಾರುತಿ ಶಿಫ್ಟ್ ಡಿಸೈರ್ ಕಾರನ್ನು ನುರಿತ ಚಾಲಕನೊಂದಿಗೆ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.

**ಟೆಂಡರ್ ವಿವರ ಈ ಕೆಳಗಿನಂತಿದೆ**

| | | |
|---|---|---|
| 1 | ವಾಹನ ಬಾಡಿಗೆ ಟೆಂಡರ್‌ನ ಗರಿಷ್ಟ ಮೊತ್ತ ರೂ. (ದಿನಾಂಕ: 01/04/2025 ರಿಂದ 31/03/2026 ರವರೆಗೆ) | ಮಾಸಿಕ ಗರಿಷ್ಟ : 40,000/– (ಎ.ಸಿ. ಸಹಿತ ವಾಹನ) |
| 2 | ಟೆಂಡರ್ ಫಾರಂ ಕೊಡುವ ದಿನಾಂಕ | ದಿನಾಂಕ:11/04/2025 ರಿಂದ ದಿನಾಂಕ:25/04/2025 ವರೆಗೆ ರಜಾ ದಿನಗಳನ್ನು ಹೊರತುಪಡಿಸಿ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.00 ಗಂಟೆಯವರಿಗೆ. |
| 3 | ಟೆಂಡರ್ ಫಾರಂನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ | 25/04/2025 ಮಧ್ಯಾಹ್ನ 1.00 ಗಂಟೆಯ ವರೆಗೆ |
| 4 | ಟೆಂಡರ್ ತೆರೆಯುವ ದಿನಾಂಕ | ದಿನಾಂಕ:25/04/2025 ರಂದು ಮಧ್ಯಾಹ್ನ 1.30 ಗಂಟೆಗೆ (ಮೀನುಗಾರಿಕೆ ಉಪ ನಿರ್ದೇಶಕರು, ವಿಜಯನಗರ ರವರ ಸಮ್ಮುಖದಲ್ಲಿ ತೆರೆಯಲಾಗುವುದು) |
| 5 | ಇ.ಎಂ.ಡಿ (ಮುಂಗಡ ಠೇವಣಿ) | ರೂ. 10,000/– ಮೊತ್ತದ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ. ಅನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು, ಹರಪನಹಳ್ಳಿ ಇವರ ಹೆಸರಿಗೆ ಪಡೆದು ಸಲ್ಲಿಸತಕ್ಕದ್ದು. |

**ಸೂಚನೆ:** ಟೆಂಡರ್ ಅಧಿಸೂಚನೆಯ ಮಾಹಿತಿಯ ವಿವರ ಮತ್ತು ಇತರೆ ನಿಯಮಗಳ ಬಗ್ಗೆ ಈ ಕಛೇರಿಗೆ ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/– **ಮೀನುಗಾರಿಕೆ ಸಹಾಯಕ ನಿರ್ದೇಶಕರು**
**ಹರಪನಹಳ್ಳಿ**

TOSHIBA GALTECH
OUR OFFERINGS:
Sales & Distribution – Genuine Toshiba photocopiers and GALTECH Smart panels
Service & Maintenance – Expert technical support and AMC services
Consumables & Accessories – Genuine spare parts
M:9686663132
Transforming EDUCATION
SAI MANI ENTERPRISES
Authorized Dealer of Toshiba Photocopiers & GALTECH Sirius interactive flat panel display for Vijayanagara, Bellary and Koppal Districts
# 545/A 6th Ward, Hampi Road, HOSAPETE-583201, Vijayanagara Dist.

**ಮೈಕ್ರೋ ನ್ಯೂಸ್**

## ಏ.24ರಿಂದ ದ್ವಿತೀಯ ಹಂತದ ಪಿಯು ಪರೀಕ್ಷೆ

ಮೂರನೇ ಪುಟದಿಂದ

ರನ್ವಯ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ತಾಲ್ಲೂಕವಾರು ಪರೀಕ್ಷೆ ಕೇಂದ್ರಗಳ ವಿವರ: ಕೊಪ್ಪಳ ತಾಲೂಕಿನ ಸರ್ಕಾರಿ ಬಾಲಕರ ಪಿಯು ಕಾಲೇಜ್ ಮತ್ತು ಸರ್ಕಾರಿ ಬಾಲಕಿಯರ ಪಿಯು ಕಾಲೇಜ್ ಕೊಪ್ಪಳ ಪರೀಕ್ಷಾ ಕೇಂದ್ರಗಳು, ಗಂಗಾವತಿ ತಾಲ್ಲೂಕಿನ ಸರ್ಕಾರಿ ಬಾಲಕರ ಪಿಯು ಕಾಲೇಜ್ ಮತ್ತು ಸರ್ಕಾರಿ (ಎಸ್.ಎಮ್.ಎನ್.ಎಮ್) ಬಾಲಕಿಯರ ಪಿಯು ಕಾಲೇಜ್ ಗಂಗಾವತಿ ಪರೀಕ್ಷಾ ಕೇಂದ್ರಗಳು, ಕುಷ್ಟಗಿ ತಾಲ್ಲೂಕಿನ ಸರ್ಕಾರಿ ಬಾಲಕರ ಪಿಯು ಕಾಲೇಜ್ ಮತ್ತು ಸರ್ಕಾರಿ ಬಾಲಕಿಯರ ಪಿಯು ಕಾಲೇಜ್ ಕುಷ್ಟಗಿ, ಯಲಬುರ್ಗಾ ತಾಲ್ಲೂಕಿನ ಸರ್ಕಾರಿ ಪಿಯು ಕಾಲೇಜ್ ಹಾಗೂ ಕಾರಟಗಿ ತಾಲ್ಲೂಕಿನ ಸರ್ಕಾರಿ ಪಿಯು ಕಾಲೇಜ್ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿವೆ.

ನಿಷೇಧಾಜ್ಞೆ ಜಾರಿಯನ್ವಯ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಎಸ್.ಟಿ.ಡಿ. ಮೊಬೈಲ್, ಪೇಜರ್, ಜರಾಕ್ಸ್, ಟೈಪಿಂಗ್ ಮುಂತಾದವುಗಳನ್ನು ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಹಾಗೂ ನಿಯೋಜಿತ ಶಿಕ್ಷಕರನ್ನು ಜಾಗೃತ ದಳದವರನ್ನು ಹೊರತುಪಡಿಸಿ ಇನ್ನುಳಿದವರಿಗೆ ಪರವಾನಿಗೆ ಇಲ್ಲದೆ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಮಾಡುವುದನ್ನು ನಿಷೇಧಿಸಿದೆ. ಪರೀಕ್ಷಾ ಕೇಂದ್ರಗಳ ಸುತ್ತಲೂ ಜನರು ಮಾರಕಾಸ್ತ್ರಗಳನ್ನು ಹಿಡಿದು ತಿರುಗಾಡುವುದನ್ನು ನಿಷೇಧಿಸಿದೆ. ಈ ಆದೇಶವು ಮದುವೆ, ಶವ ಸಂಸ್ಕಾರಗಳು ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ವಯವಾಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

# ಅನುಭವ ಮಂಟಪ - ಬಸವಾದಿ ಶರಣರ ವೈಭವ ರಥಯಾತ್ರೆ



■ **ಹಂಪಿ ಟೈಮ್ಸ್ ಬಳ್ಳಾರಿ**

ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಬದುಕು, ಸಂದೇಶ ಮತ್ತು ಚಿಂತನೆಗಳನ್ನು ಪ್ರಚುರ ಪಡಿಸುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಹಮ್ಮಿಕೊಂಡಿರುವ ಅನುಭವ ಮಂಟಪ–ಬಸವಾದಿ ಶರಣರ ವೈಭವ ರಥಯಾತ್ರೆಯು ಮಂಗಳವಾರ ಬಳ್ಳಾರಿಗೆ ಆಗಮಿಸಿತು.

ಸಮುದಾಯದ ಮುಖಂಡರು, ನಗರದ ಡಾ. ರಾಜ್ ಕುಮಾರ್ ರಸ್ತೆಯ ಸರ್ಕಾರಿ (ಮಾ.ಪು) ಪದವಿ ಪೂರ್ವ ಕಾಲೇಜು ಮೈದಾನದ ಆವರಣದಲ್ಲಿ ರಥಯಾತ್ರೆಯನ್ನು ಸ್ವಾಗತಿಸಿದರು. ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬಸವಾದಿ ಶರಣರ ರಥಯಾತ್ರೆಗೆ ಪೂಜೆ ಸಲ್ಲಿಸಿ ಪುಷ್ಪನಮನಗೈದು, ಗೌರವ ಸಮರ್ಪಿಸಲಾಯಿತು.

ಇದೇ ಏ.29 ಮತ್ತು 30ರಂದು ಬಾಗಲಕೋಟೆ ಜಿಲ್ಲೆಯ ಕೂಡಲ ಸಂಗಮದಲ್ಲಿ ಎರಡು ದಿನಗಳ ಕಾಲ ಆಯೋಜಿಸಿರುವ "ಅನುಭವ ಮಂಟಪ–ಬಸವಾದಿ ಶರಣ ವೈಭವ" ಕಾರ್ಯಕ್ರಮದ ಅಂಗವಾಗಿ ರಥಯಾತ್ರೆ ಆಯೋಜಿಸಲಾಗಿದ್ದು, ಮಂಗಳವಾರ ಬಳ್ಳಾರಿ ನಗರಕ್ಕೆ ಆಗಮಿಸಿದ ರಥಯಾತ್ರೆಯು ಸಿರುಗುಪ್ಪ ಮೂಲಕ ರಾಯಚೂರು ಜಿಲ್ಲೆಗೆ ರಥಯಾತ್ರೆಯು ತೆರಳಿತು.

ಜಗತ್ತಿನ ಪ್ರಪ್ರಥಮ ಸಂಸತ್ತು ಅನುಭವ ಮಂಟಪ–ಬಸವಾದಿ ಶರಣರ ವೈಭವ ರಥದಲ್ಲಿ ಬಸವಣ್ಣ ಅವರೊಂದಿಗೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್, ಭಗವಾನ್ ಗೌತಮ ಬುದ್ಧ, ಶಿವಶರಣೆ ಅಕ್ಕಮಹಾದೇವಿ, ಸಂತ ಶಿಶುನಾಳ ಶರೀಪ, ಗುರುನಾನಕ್, ಭಗವಾನ್ ಮಹಾವೀರ, ನಾರಾಯಣ ಗುರು, ಯೇಸು ಕ್ರಿಸ್ತರ ಪ್ರತಿಮೆಗಳನ್ನು ಅಳವಡಿಸಲಾಗಿದೆ.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ನಾಗರಾಜ್, ರಾಷ್ಟ್ರೀಯ ಬಸವ ದಳ ಕಾರ್ಯದರ್ಶಿ ರವಿಶಂಕರ್, ಮುಖಂಡರಾದ ಪನ್ನರಾಜ್ ಸಿರಿಗೇರಿ, ಟಿ.ಹೆಚ್.ಎಂ.ಬಸವರಾಜ್ ಸೇರಿದಂತೆ ಇಲಾಖೆ ಅಧಿಕಾರಿಗಳು ಹಾಗೂ ಇತರರು ಇದ್ದರು.

# ಯುವತಿ ಕೊಲೆಗೆ ಯತ್ನ ಜನರಲ್ಲಿ ಹೆಚ್ಚಿದ ಆತಂಕ



■ **ಹಂಪಿ ಟೈಮ್ಸ್ ಹೊಸಪೇಟೆ**

ಇಲ್ಲಿನ ನಗರಸಭೆ ಪಕ್ಕದ ಮುಖ್ಯರಸ್ತೆಯಲ್ಲಿ ಹಾಡುಹಗಲೇ ಯುವಕನೋರ್ವ ದ್ವಿಚಕ್ರವಾಹನದಲ್ಲಿ ತೆರಳುತ್ತಿದ್ದ ಯುವತಿಯನ್ನು ಅಡ್ಡಗಟ್ಟಿ ಚಾಕುವಿನಿಂದ ಕೊಚ್ಚಿ ಕೊಲೆ ಮಾಡಲು ಯತ್ನಿಸಿದ ಘಟನೆ ಮಂಗಳವಾರ ಪಟ್ಟಣ ಠಾಣೆ ವ್ಯಾಪ್ತಿಯಲ್ಲಿ ಬೆಳಿಗ್ಗೆ ನಡೆದಿದೆ. ನಗರದಲ್ಲಿ ಕೊಲೆ ಪ್ರಕರಣವೊಂದು ಮಾಸುವ ಮುನ್ನವೇ ಘಟನೆ ಮರುಕಳಿಸಿರುವುದು ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಸಿದೆ.

ಭಾರತಿ ಶಾವಿ (26) ಯುವತಿಯು ಕಿರಾತಕನ ಚಾಕು ತಿವಿತಕ್ಕೆ ಒಳಗಾಗಿ ಗಾಯಗೊಂಡಿದ್ದಾಳೆ. ಆ ಸ್ಥಳದಲ್ಲಿ ಸಂಚರಿಸುತ್ತಿದ್ದ ಸಾರ್ವಜನಿಕರು ಯುವತಿಯ ಮೇಲೆ ಚಾಕು ಹಾಕಲು ಯತ್ನಿಸುತ್ತಿದ್ದ ಆಂಧ್ರ ಮೂಲದ ಯುವಕ ವಿಜಯ ಭಾಸ್ಕರ ಎಂಬಾತನನ್ನು ತಡೆದಿದ್ದಾರೆ. ತಡೆಯಲು ಹೋದ ವ್ಯಕ್ತಿಯ ಕೈಗೂ ಮತ್ತು ಯುವತಿಗೂ ಚಾಕು ತಗುಲಿ ರಕ್ತ ಸುರಿದಿದೆ. ಅದೃಷ್ಟಾವಶಾತ್ ಯುವತಿ ಕೊಲೆಯಿಂದ ಪಾರಾಗಿದ್ದಾಳೆ. ಗಾಯಗೊಂಡ ಯುವತಿ ಸರ್ಕಾರಿ ನೂರು ಹಾಸಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ದಾಖಲಾಗಿದ್ದು, ಗಾಯಗೊಂಡ ಯುವತಿಯಿಂದ ಪೊಲೀಸರು ಮಾಹಿತಿ ಸಂಗ್ರಹಿಸಿ ತನಿಖೆ ಕೈಗೊಂಡಿದ್ದಾರೆ.

## ಏ.24 ರಂದು ಬಳ್ಳಾರಿ ನಗರದಲ್ಲಿ ವಿವಿಧೆಡೆ ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಯ 110/11ಕೆವಿ ಸೌತ್ ವಿದ್ಯುತ್ ವಿತ ರಣಾ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಫೀಡರ್ ಎಫ್–25 ರ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರು ವುದರಿಂದ ಏ.24 ರಂದು ಬೆಳಿಗ್ಗೆ 09 ಗಂಟೆಯಿಂದ ಸಂಜೆ 04 ಗಂಟೆಯವರೆಗೆ ನಗರದ ಆರ್.ಕೆ ಮಿಲ್ ರೋಡ್, ಬಾಪೂಜಿ ನಗರ, ಬಾಪೂಜಿ ನಗರ ಸರ್ಕಲ್, ರಾಣಿತೋಟ, ಕಣೆಕಲ್ ಬಸ್ ಸ್ಟ್ಯಾಂಡ್, ಮಾರ್ಕೆಟ್ ಟೋಪಿಗಲ್ಲಿ, ಮರಿಸ್ವಾಮಿ ಮಠ ಸೇರಿದಂತೆ ಇನ್ನೂ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹ.ಬೊ.ಹಳ್ಳಿ ಪುರಸಭೆಯಲ್ಲಿ ಭೂಮಿ ದಿನಾಚರಣೆ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಇಲಿನ ಪುರಸಭಾ ಕಾರ್ಯಾಲಯದ ಆವರಣದಲ್ಲಿ ಪುರಸಭೆವತಿಯಿಂದ ಮಂಗಳವಾರ ಭೂಮಿ ದಿನಾಚರಣೆಯನ್ನು ಸಸಿ ನೆಡುವ ಮೂಲಕ ಆಚರಿಸಲಾಯಿತು. ಪುರಸಭೆ ಅಧ್ಯಕ್ಷ ಎಂ. ಮರಿರಾಮಪ್ಪ, ಮುಖ್ಯಾಧಿಕಾರಿ ಪ್ರಭಾಕರ. ಎಂ. ಪಾಟೀಲ, ಚಿಂತ್ರಪಲ್ಲಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ದೇವೇಂದ್ರಪ್ಪ, ಸದಸ್ಯರಾದ ಆಜೀಜುಲ್ಲಾ, ಗುಂಡ್ರು ಹನುಮಂತಪ್ಪ, ಸದಸ್ಯ ಸಿಖಂದರ್ ಹಾಗೂ ಕಂದಾಯ ನಿರೀಕ್ಷಕರಾದ ಸಾವಿತ್ರಮ್ಮ, ಮಾರುತಿ ಬೆಳ್ಳಕ್ಕಿ, ಮಂಜುನಾಥ್ ಇತರರಿದ್ದರು.



# 6ನೇ ತರಗತಿಗೆ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶ ಪಡೆಯಲು ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಸಂಡೂರು ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2025–26ನೇ ಸಾಲಿಗೆ 5ನೇ ತರಗತಿಯಲ್ಲಿ ಶೇ.60 ಕ್ಕಿಂತ ಹೆಚ್ಚು ಅಂಕ ಪಡೆದಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ 6ನೇ ತರಗತಿಗೆ ಪ್ರತಿಷ್ಠಿತ ಖಾಸಗಿ ಶಾಲೆಗಳಲ್ಲಿ ಅರ್ಹತಾ ಪರೀಕ್ಷೆಯ ಮೂಲಕ ಆಯ್ಕೆ ಮಾಡಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಸಂಡೂರು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಯಿಂದ ಉಚಿತವಾಗಿ ಪಡೆದುಕೊಂಡು ಭರ್ತಿ ಮಾಡಿದ ಅರ್ಜಿಗಳನ್ನು ಮೇ 03 ರೊಳಗೆ ಇದೇ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸಂಡೂರು ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಅಥವಾ ದೂ.08395–200073 ಗೆ ಸಂಪರ್ಕಿಸಬಹುದು ಎಂದು ಸಂಡೂರು ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಏ.26 ರಿಂದ ಕಾಲುಬಾಯಿ ಜ್ವರ ಹಾಗೂ ಚರ್ಮಗಂಟು ರೋಗಕ್ಕೆ ಉಚಿತ ಲಸಿಕೆ ಅಭಿಯಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಾದ್ಯಂತ ಏಪ್ರಿಲ್ 26 ರಿಂದ ಜೂನ್ 06 ರವರೆಗೆ ಕೇಂದ್ರ ಪುರಸ್ಕೃತ ಎನ್‌ಎಡಿಸಿಪಿ ಯೋಜನೆಯಡಿ 7ನೇ ಸುತ್ತಿನ ಕಾಲುಬಾಯಿ ಜ್ವರದ ಹಾಗೂ ಚರ್ಮಗಂಟು ರೋಗದ ಉಚಿತ ಲಸಿಕೆ ಅಭಿಯಾನ ನಡೆಯಲಿದ್ದು, ಅಭಿಯಾನದಲ್ಲಿ ರೈತರು ತಮ್ಮ ಜಾನುವಾರು ಮತ್ತು ಸಾಕು ಪ್ರಾಣಿಗಳಿಗೆ ತಪ್ಪದೇ ಲಸಿಕೆ ಹಾಕಿಸಬೇಕು ಎಂದು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ.ಹನುಮಂತ ಕಾರಬಾರಿ ಅವರು ತಿಳಿಸಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ 20ನೇ ಜಾನುವಾರು ಗಣತಿಯನ್ವಯ 1,14,577 ದನಗಳು, 66034 ಎಮ್ಮೆಗಳು ಸೇರಿ ಒಟ್ಟು 1,80,611 ದನ ಮತ್ತು ಎಮ್ಮೆಗಳಿವೆ. ಕಾಲು ಬಾಯಿ ಜ್ವರವು ಹಸು, ಎತ್ತು, ಎಮ್ಮೆ, ಹೋರಿ ಮತ್ತು ಹಂದಿಗಳಲ್ಲಿ ಕಾಣಿಸಿಕೊಳ್ಳುವ ಮಾರಕ ರೋಗವಾಗಿದ್ದು, ಮುಖ್ಯವಾಗಿ ದನ ಮತ್ತು ಎಮ್ಮೆಗಳಲ್ಲಿ ಕಂಡುಬರುವುದರಿಂದ ರೈತರಿಗೆ ಆರ್ಥಿಕ ಸಂಕಷ್ಟ ಉಂಟಾಗುತ್ತದೆ. ವರ್ಷಕ್ಕೆ ಎರಡು ಬಾರಿ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದ್ದು, ರೈತರು ತಮ್ಮ ದನ ಮತ್ತು ಎಮ್ಮೆಗಳಿಗೆ ಕಾಲು ಬಾಯಿ ರೋಗದ ಲಸಿಕೆಯನ್ನು ನಾಲ್ಕು ತಿಂಗಳು ಮೇಲ್ಪಟ್ಟ ದನ ಮತ್ತು ಎಮ್ಮೆಗಳಿಗೆ ತಪ್ಪದೇ ಹಾಕಿಸಬೇಕು ಎಂದು ತಿಳಿಸಿದ್ದಾರೆ.

ಅದೇರೀತಿಯಾಗಿ ಚರ್ಮಗಂಟು ರೋಗವು ಸಾಂಕ್ರಾಮಿಕ ಖಾಯಿಲೆಯಾಗಿದ್ದು, ರೋಗವು ಮುಖ್ಯವಾಗಿ ದನಗಳಲ್ಲಿ ಮಾತ್ರ ಕಂಡುಬರುವುದರಿಂದ ದನಗಳಿಗೆ ಮಾತ್ರ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರೈತರು ತಮ್ಮ ದನಗಳಿಗೆ ಮಾತ್ರ ಚರ್ಮಗಂಟು ರೋಗದ ಲಸಿಕೆ ಹಾಕಿಸಬೇಕು.

ರಾಸುಗಳು ಈ ರೋಗಗಳಿಂದ ಮುಕ್ತವಾದರೂ ಸಹ ಗರ್ಭಕಟ್ಟುವಿಕೆಯಲ್ಲಿ ವಿಳಂಬ, ಸಾಮರ್ಥ್ಯ ನಷ್ಟ ಮತ್ತು ಹಾಲಿನ ಇಳುವರಿ ಕಡಿಮೆ ಹಾಗೂ ಇತರೆ ಅನೇಕ ತೊಂದರೆಗಳನ್ನು ಎದುರಿಸಬೇಕಾದ ಅನಿವಾರ್ಯತೆ ಇರುತ್ತದೆ. ಹಾಗಾಗಿ ಜಿಲ್ಲೆಯ ಎಲ್ಲಾ ರೈತರು ಕಾಲುಬಾಯಿ ಜ್ವರ ಲಸಿಕೆ ಹಾಗೂ ಚರ್ಮಗಂಟು ರೋಗ ಲಸಿಕಾ ಅಭಿಯಾನದಲ್ಲಿ ಪಾಲ್ಗೊಂಡು ತಮ್ಮೆಲ್ಲ ಜಾನುವಾರುಗಳಿಗೆ ತಪ್ಪದೇ ಲಸಿಕೆ ಹಾಕಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

HAMPI TIMES VIJAYANAGARA
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
ನಂ.1 ಜಿಲ್ಲಾಮಟ್ಟದ ದಿನಪತ್ರಿಕೆ
E-PAPER USER ENGAGEMENT 1,50,000+
Searching for the perfect platform to promote your brand? Want to reach more people? Choose
HAMPI TIMES
Promote your business with us!
Place Your Ads in HAMPI TIMES Kannada Daily
No.1 Local News Paper in the Vijayanagara Dist.
1 Lakh plus Digital readers & Growing
Available in Print and Digital Edition
Dedicated to Local and Regional news
Trusted Readershiip Community
E-paper available at www.hampitimes.com/epaper.hampitimes.com
Flexible Advertising Packages
ADS
POWERFULL ADVERTISING FLATFORM FOR LOCAL BUSINESS!
Contact Us 9448633038